ಏಪ್ರಿಲ್ 30

## ಪ್ರವಾದನಾ ವಾಕ್ಯಗಳು!

ಬೆಳಿಗ್ಗೆ : 1 ಅರಸು 8,9
ಸಂಜೆ : ಲೂಕ. 21:10

"ಇಗೋ, ಬೇಗನೆ ಬರುತ್ತೇನೆ. ಈ ಪುಸ್ತಕದಲ್ಲಿ ಬರೆದಿರುವ ಪ್ರವಾದನೆಯ ಮಾತುಗಳನ್ನು ಕೈಕೊಂಡು ನಡೆಯುವವನು ಧನ್ಯನು" (ಪ್ರಕ. 22:7).

ಪ್ರವಾದನಾ ಪುಸ್ತಕವಾದ ಸತ್ಯವೇದವು "ವಾರ್ತೆ" ಎಂದು ಕರೆಯಲ್ಪಡುವದು. ಅವು "ದೇವರ ಆಜ್ಞೆಗಳು", "ಪವಿತ್ರ ಬರಹಗಳು". ಸತ್ಯವೇದ ವಾಕ್ಯಗಳಿಗೆ "ಆತ್ಮನ ಖಡ್ಗ"ವೆಂದೂ ಹೆಸರುಂಟು. ಪ್ರಕಟಣೆಯ ಪುಸ್ತಕಕ್ಕೆ ಬರುವಾಗ, ಈ ಪುಸ್ತಕವನ್ನು ಭವಿಷ್ಯತ್ಕಾಲದ ಪ್ರವಾದನೆಯ ಪುಸ್ತಕವಾಗಿ ಕಾಣಬಹುದು.

ಈ ಪ್ರಪಂಚದ ಪುಸ್ತಕಗಳೆಲ್ಲಾ ಭೂತಕಾಲ, ವರ್ತಮಾನ ಕಾಲದ ಸಂಗತಿಗಳನ್ನು ತಿಳಿಸುವವು. ಆದರೆ ಪವಿತ್ರ ಸತ್ಯವೇದವು ಭವಿಷ್ಯತ್ಕಾಲದಲ್ಲಿ ನಡೆಯಲಿರುವ ಸಂಭವಗಳನ್ನು ಹೇಳುವಂಥ ಪ್ರವಾದನೆಗಳನ್ನು ಒಳಗೊಂಡ ಪುಸ್ತಕವಾಗಿದೆ. ಹಳೆಯ ಒಡಂಬಡಿಕೆಯಲ್ಲಿ ಬ್ಯಾಬಿಲೋನಿನ ಅರಸನಾದ ನೆಬೂಕದ್ನೆಚ್ಚರನು ಮುಂದೆ ಏನು ಸಂಭವಿಸಲಿರುವದು ಎಂಬ ಆಲೋಚನೆಯೊಂದಿಗೆ ಹಾಸಿಗೆಗೆ ತೆರಳಿದಾಗ, ರಹಸ್ಯಗಳನ್ನು ಪ್ರಕಟಿಸುವ ಕರ್ತನು ಮುಂದೆ ಸಂಭವಿಸಲಿರುವದನ್ನು ಅವನಿಗೆ ತಿಳಿಸಿದನು (ದಾನಿ. 2:29). ಹಾಗೆಯೇ ಶಿಷ್ಯರು ಮುಂದೆ ಸಂಭವಗಳ ಕುರಿತು ತಿಳಿಯಲಪೇಕ್ಷಿಸಿ ಯೇಸು ಕ್ರಿಸ್ತನನ್ನು ನೋಡಿ ನಿನ್ನ ಎರಡನೇ ಬರುವಿಕೆಗೂ, ಪ್ರಪಂಚದ ಅಂತ್ಯಕ್ಕೂ ಗುರುತು ಯಾವದು? ಎಂದು ಕೇಳಿದರು. ಆಗ ಯೇಸುಕ್ರಿಸ್ತನು ಅವರಿಗೆ ಎಷ್ಟು ಸ್ಪಷ್ಟವಾಗಿ ಭವಿಷ್ಯತ್ತಿನಲ್ಲಿ ಸಂಭವಿಸಲಿರುವ ಸಂಗತಿಗಳನ್ನು ವಿವರಿಸಿದನು. ಮತ್ತಾಯ 24ನೇ ಅಧ್ಯಾಯ ಪೂರ್ತಿ ಪ್ರವಾದನಾ ವಾಕ್ಯಗಳಾಗಿವೆ. ಸತ್ಯವೇದದಲ್ಲಿ ಶೇ.27% ವಾಕ್ಯಗಳು ಪ್ರವಾದನಾ ವಾಕ್ಯಗಳಾಗಿರುವವು. ಹೊಸ ಒಡಂಬಡಿಕೆಯಲ್ಲಿ ಬರುವ 7959 ವಾಕ್ಯಗಳಲ್ಲಿ, 330 ವಾಕ್ಯಗಳು ಕ್ರಿಸ್ತನ ಎರಡನೆಯ ಬರೋಣವನ್ನು ಕುರಿತು ಹೇಳುತ್ತವೆ. 1845 ಕಡೇ ಭವಿಷ್ಯತ್ಕಾಲ ಹೇಗೆ ಇರುವದು? ಎಂಬುದನ್ನು ಕುರಿತು ತಿಳಿಸುವದನ್ನು ಕಾಣಬಹುದು.

ದೇವಜನರೇ, ನೀವು ಎಚ್ಚರಗೊಂಡು ಪರಿಶುದ್ಧತೆಯ ಮೇಲೆ ಪರಿಶುದ್ಧತೆ ಹೊಂದಿ, ಕರ್ತನ ಬರುವಿಕೆಗೆ ಸಿದ್ಧಪಡಿಸಿಕೊಳ್ಳಿರಿ. ಅಪೊ. ಪೇತ್ರನು ಹೀಗೆ ಬರೆಯುತ್ತಾನೆ. "ಇದಲ್ಲದೆ ಪ್ರವಾದನಾವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವದು ಒಳ್ಳೇದು.

*ನೆನಪಿಗೆ : ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನದೂತನ ಶಬ್ದದೊಡನೆಯೂ, ದೇವರ ತುತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದುಬರುವನು. ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು (1 ಥೆಸ. 4:16).*




# ಅನುದಿನದ ಆಹಾರ

**ANUDHINADA AHARA - April 2015**

ಏಪ್ರಿಲ್ – 2015

ಮರ 16 ಹಣ್ಣು 4 Tree 16 Fruit 4


## ಆಕಾಶದಲ್ಲಿ ಯುದ್ಧ ನಡೆಯಿತು!

"ಆಕಾಶದಲ್ಲಿ ಯುದ್ಧ ನಡೆಯಿತು. ಮೀಕಾಯೇಲನೂ ಅವನ ದೂತರೂ ಘಟಸರ್ಪನ ಮೇಲೆ ಯುದ್ಧ ಮಾಡುವದಕ್ಕೆ ಹೊರಟರು. ಘಟಸರ್ಪನೂ ಅವನ ದೂತರೂ ಯುದ್ಧ ಮಾಡಿ ಸೋತುಹೋದರು" (ಪ್ರಕ. 12:7).

ಆಕಾಶದ ಕುರಿತಾಗಿಯೂ, ಪರಲೋಕದ ಕುರಿತಾಗಿಯೂ, ಪ್ರಕಟಣೆ ಗ್ರಂಥದಲ್ಲಿ ಅನೇಕ ರಹಸ್ಯಗಳು ತಿಳಿಸಲ್ಪಟ್ಟಿರುವದು. ನೂತನ ಆಕಾಶ, ನೂತನ ಭೂಮಿ, ನೂತನ ಯೆರೂಸಲೇಮು ಪ್ರಕಾಶಿಸುವ ಚೀಯೋನ್ ಇವುಗಳ ಕುರಿತು ಓದುತ್ತೇವೆ.

ಹಳೆ ಒಡಂಬಡಿಕೆಯ ಪ್ರಾರಂಭದ ವಚನವು "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು" ಎಂದು ಹೇಳುತ್ತದೆ. ಆದರೆ ಸತ್ಯವೇದದ ಅಂತ್ಯಭಾಗದಲ್ಲಿ "ನೂತನಾಕಾಶಮಂಡಲವನ್ನೂ, ನೂತನಭೂಮಂಡಲವನ್ನೂ ಕಂಡೆನು. ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು" (ಪ್ರಕ. 21:1) ಎಂದು ಬರೆಯಲ್ಪಟ್ಟಿದೆ. 'ಆಕಾಶ' ಎಂಬುದಕ್ಕೆ ಆಕಾಶಮಂಡಲ, ಪರಲೋಕ ರಾಜ್ಯ, ನಿತ್ಯರಾಜ್ಯ ಎಂದು ಅನೇಕ ಅರ್ಥಗಳುಂಟು. ಪರಲೋಕದಲ್ಲಿ ತಂದೆಯ ಬಲಪಾರ್ಶ್ವದಲ್ಲಿ ಕ್ರಿಸ್ತನು ಗಂಭೀರವಾಗಿ ಆಸೀನನಾಗಿರುವನು. ಅಲ್ಲಿ ಪವಿತ್ರಾತ್ಮನು ಏಳು ಅಗ್ನಿ ಸ್ತಂಭಗಳಾಗಿ ಕಾಣಲ್ಪಡುವನು. ಪರಲೋಕದಲ್ಲಿ ಕರ್ತನು ನಮಗಾಗಿ ಒಂದು ವಾಸಸ್ಥಳವನ್ನು ಸಿದ್ಧಪಡಿಸುತ್ತಿರುವನು. ರಕ್ಷಿಸಲ್ಪಟ್ಟವರ ಹೆಸರುಗಳು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿರುವದು. ಕ್ರಿಸ್ತನು ಇರುವೆಡೆಯಲ್ಲಿ ನಾವೂ ಇರುವೆವು. ದೇವದೂತರು, ಕೆರೂಬಿಗಳು ಸೆರಾಫಿಗಳು ಇರುವ ಆಕಾಶ ಉಂಟು.

ಪ್ರಕಟಣೆ ಗ್ರಂಥದ 12ನೇ ಅಧ್ಯಾಯದಲ್ಲಿ ಅನೇಕ ಸಾರಿ 'ಆಕಾಶ' ಎಂಬ ಪದ ಬರುವದು. "ಆಕಾಶದಲ್ಲಿ ಒಂದು ಮಹಾ ಲಕ್ಷಣವು ಕಾಣಿಸಿತು" (ಪ್ರಕ. 12:1). "ಆಕಾಶದಲ್ಲಿ ಮತ್ತೊಂದು ಲಕ್ಷಣವು ಕಾಣಿಸಿತು" (ಪ್ರಕ. 12:3). ಘಟಸರ್ಪದ ಬಾಲವು ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರರಲ್ಲೊಂದು ಭಾಗವನ್ನು ಎಳೆದು ಭೂಮಿಗೆ

ಹಾಕಿತು" (ಪ್ರಕ. 12:4). "ಆಕಾಶದಲ್ಲಿ ಯುದ್ಧ ನಡೆಯಿತು" (ಪ್ರಕ. 12:7). "ಪರಲೋಕದೊಳಗೆ ಅವರಿಗೆ ಸ್ಥಾನ ತಪ್ಪಿಹೋಯಿತು" (ಪ್ರಕ. 12:8). "ಪರಲೋಕದಲ್ಲಿ ಮಹಾ ಶಬ್ದ ಉಂಟಾಯಿತು" (ಪ್ರಕ. 12:10) ಎಂದೆಲ್ಲಾ ಬರೆಯಲ್ಪಟ್ಟಿದೆ.

ಈ ಅಧ್ಯಾಯದಲ್ಲಿ ಆಕಾಶ ಎಂದು ಬರುವದನ್ನು ಆಕಾಶಮಂಡಲದಲ್ಲಿ ನಡೆಯುವ ಸಂಭವಗಳೆಂದು ನೀವು ತಿಳಿಯತಕ್ಕದ್ದು. ಶಿಲುಬೆಯಲ್ಲಿ ಸೋತುಹೋದ ಸೈತಾನನು ತಲೆ ಜಜ್ಜಲ್ಪಟ್ಟವನಾಗಿ ನ್ಯಾಯ ತೀರ್ಪಿಗೆ ಒಳಗಾಗಿ ಅಂತ್ಯದಲ್ಲಿ ಅಗ್ನಿಯೂ, ಗಂಧಕವೂ ಉರಿಯುವ ಕಡಲಿನಲ್ಲಿ ತಳ್ಳಲ್ಪಡುವದನ್ನು ನಾಲ್ಕನೆಯ ವಚನವು ವಿವರಿಸುವದು. ಪ್ರಪಂಚದ ಅಂತ್ಯವು ಸಮೀಪಿಸಿದೆ ಎಂದೂ, ಆಕಾಶ ಮಂಡಲದಲ್ಲಿ ಒಂದು ಮೈಲಿ ಉದ್ದವಾದ ಕಪ್ಪಾದ ಒಂದು ನಕ್ಷತ್ರ, ಭೂಮಿಯನ್ನು ಎಳೆದುಕೊಂಡು ಹೋಗುವದೆಂದು ವಿಜ್ಞಾನಿಗಳು ಹೇಳುವರು. ಸುಮಾರು ಐದುಸಾವಿರ ವರುಷಗಳಿಗೆ ಮೊದಲು ತಯಾರಿಸಲ್ಪಟ್ಟ 'ಮಾಯಾ ಕ್ಯಾಲೆಂಡರ್ ಪ್ರಪಂಚದ ಅಂತ್ಯವನ್ನೂ, ನಾಶವನ್ನೂ ಕುರಿತು ಎಚ್ಚರಿಸುವದು.

ಮೊದಲನೇ ಮಹಾ ಯುದ್ಧದಲ್ಲಿ ಸೈನಿಕರು ಸತ್ತರು. ಆದರೆ ಎರಡನೇ ಮಹಾಯುದ್ಧದಲ್ಲಿ ಸೈನಿಕರಿಗಿಂತಲೂ ಸಾಧಾರಣ ಜನರು ಅಧಿಕವಾಗಿ ಮರಣಹೊಂದಿದರು. ಮೊದಲೆಲ್ಲಾ ಯುದ್ಧದಲ್ಲಿ ಕಾಲ್ಪಡೆ ಎಂದೂ, ಬಿಲ್ಲುಪಡೆ ಎಂದೂ, ರಥ ಬಲವೆಂದೂ, ಆನೆಯ ಬಲವೆಂದೂ ಇದ್ದಿತು. ನಂತರ ಭೂಸೈನ್ಯ, ನೌಕಾಪಡೆ, ವಿಮಾನ ಪಡೆ ಬಂದಿತು. ಅದರ ನಂತರ ಅಣುಗುಂಡುಗಳ ಮೂಲಕ ಯುದ್ಧ ಪ್ರಾರಂಭವಾಯಿತು. ಅಣುಗುಂಡುಗಳ ಮೂಲಕ ಜಪಾನಿನ ನಾಗಸಾಕಿ, ಹಿರೋಷಿಮಾ ನಗರಗಳು ನಾಶವಾದವು. ನಂತರ ರಾಕೆಟ್‌ಗಳು ತಯಾರಿಸಲ್ಪಟ್ಟಿತು. ಇನ್ನು ಯಾವ ಸೈನಿಕನೂ ಹೋಗಿ ಯುದ್ಧಮಾಡುವ ಅವಶ್ಯಕತೆ ಇಲ್ಲ. ಒಂದು ಗುಂಡಿ ಒತ್ತಿದರೆ ಸಾಕು ರಾಕೆಟ್‌ಗಳು ಹೋಗಿ ಶತ್ರುವಿನ ಎಲ್ಲೆಯನ್ನು ತಾಕಿ ನಾಶಗೊಳಿಸುವುದು. ಈಗ ಬಹಳ ಅಪಾಯಕಾರಿಯಾದ ವಿಷವಾಯು ಗುಂಡುಗಳನ್ನು ತಯಾರಿಸುತ್ತಿರುವರು. ಕಂಪ್ಯೂಟರಿನ ಒಂದು ಗುಂಡಿಯನ್ನು ಒತ್ತಿದರೆ ಸಾಕು ಆಕಾಶ ಮಂಡಲದಲ್ಲಿರುವ ಗಾಳಿಯೆಲ್ಲಾ ವಿಷವಾಯುವಾಗಿ ಮಾರ್ಪಡುವದು. ಯಾವ ಅಣುಗುಂಡುವಿನ ಶಬ್ದವೂ ಕೇಳಿಸುವದಿಲ್ಲ. ಆ ವಿಷವಾಯು ಪರಿಸರದಲ್ಲಿ ಹರಡಿ ಶ್ವಾಸಕಟ್ಟಿ ಲಕ್ಷಾಂತರ ಜನರು ಮರಣಕ್ಕೆ ಒಳಗಾಗುವರು.

ಎಷ್ಟು ಆಕಾಶಗಳಿರುವವೆಂದು ನೀವು ಕೇಳಬಹುದು? ಕೆಲವರು ಮೂರು ಆಕಾಶಗಳೆಂದೂ, ಕೆಲವರು ಏಳು ಆಕಾಶಗಳೆಂದೂ, ಕೆಲವು ಎಪ್ಪತ್ತು ಆಕಾಶಗಳಿರುವವೆಂದು ಹೇಳುವರು. ಸತ್ಯವೇದದ ಹಲವು ಕಡೆಗಳಲ್ಲಿ ಉನ್ನತೋನ್ನತ ಆಕಾಶಗಳೆಂದು ಬರೆಯಲ್ಪಟ್ಟಿದೆ (ಕೀರ್ತ. 148:4). ಇದರಿಂದ ಅಪೊ. ಪೌಲನು



ಮೂರನೆಯ ಆಕಾಶವಾಗಿರುವ ಪರದೈಸಿಗೆ ಮಾತ್ರ ಒಯ್ಯಲ್ಪಟ್ಟನೆಂದೂ ಅದರ ಮೇಲೆ ಇರುವ ಪರಲೋಕಕ್ಕೆ ಒಯ್ಯಲ್ಪಡಲಿಲ್ಲವೆಂಬುದನ್ನು ನಾವು ತಿಳಿಯುತ್ತೇವೆ.

ಹಾಗಾದರೆ ಯಾವ ಆಕಾಶದಲ್ಲಿ ಯುದ್ಧ ನಡೆಯಿತು? ನಮ್ಮ ತಲೆಯ ಮೇಲೆ ಆಕಾಶಮಂಡಲವಿರುವದು. ಅಲ್ಲಿರುವ ಗಾಳಿಯಿಂದ ಉಸಿರಾಡುತ್ತೇವೆ. ಅಲ್ಲಿಂದ ಮಳೆ ಬೀಳುವದು. ಅಲ್ಲಿ ವಿಮಾನಗಳು ಹಾರಾಡುತ್ತವೆ. ಭೂಮಿಯ ಉಷ್ಣತೆಯನ್ನು ಆಕಾಶಮಂಡಲ ನಿರ್ಣಯಿಸುವದು. ಅದರ ಮೇಲೆ ಇರುವ ಆಕಾಶಮಂಡಲದಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳು, ಗ್ರಹಗಳು ಇರುವವು. ಒಂದು ವೇಳೆ ಸೈತಾನನು ತನ್ನ ಸೈನ್ಯದೊಡನೆ ಇಲ್ಲಿ ಇರುವನೆಂದು ತಿಳಿಯಬಹುದು. ಆದರೆ ಇದನ್ನು ಕುರಿತು ನಿಖರವಾಗಿ ಹೇಳಲಾಗದು. ಪರಲೋಕ ರಾಜ್ಯದಿಂದ ಭೂಮಿಗೆ ತಳ್ಳಲ್ಪಟ್ಟ ಸೈತಾನನ ತಲೆಯನ್ನು ಕ್ರಿಸ್ತನು ಕಲ್ವಾರಿ ಶಿಲಬೆಯಲ್ಲಿ ಜಜ್ಜಿದ್ದರಿಂದ ಅವನು ಭೂಮಿಯಲ್ಲೂ ಇರಲಾಗದೆ ಆಕಾಶಮಂಡಲಕ್ಕೆ ಹೋಗಿಬಿಟ್ಟನು. ಎಫೆಸ. 6:12ರಲ್ಲಿ "ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ" ಎಂದು ಬರೆಯಲ್ಪಟ್ಟಿರುವದು.

ಹೌದು ಆಕಾಶಮಂಡಲವು ಬಿದ್ದುಹೋದ ಆತ್ಮಗಳು ನಡೆದಾಡುವ ಸ್ಥಳವಾಗಿದೆ. ಸೈತಾನನ ಸಿಂಹಾಸನ ಅಲ್ಲಿರುವದು. ಈ ಅಂಧಕಾರ ಲೋಕಾಧಿಪತಿಗಳು ಭೂಮಿಯಲ್ಲಿರುವ ರಾಷ್ಟ್ರಪತಿಗಳನ್ನೂ, ಪ್ರಧಾನಮಂತ್ರಿಗಳನ್ನೂ, ಮುಖ್ಯಮಂತ್ರಿಗಳನ್ನೂ ಆವರಿಸಿಕೊಂಡು ಅವರ ಮೂಲಕ ತನ್ನ ಉದ್ದೇಶಗಳನ್ನು ನೆರವೇರಿಸುವನು. ಕ್ರೈಸ್ತ ಮಾರ್ಗಕ್ಕೆ ವಿರೋಧವಾಗಿ ಯುದ್ಧ ಮಾಡುವನು. ಸುವಾರ್ತೆ ಹರಡದಂತೆ ತಡೆ ಮಾಡಲು ಪ್ರಯತ್ನಿಸುವನು. ಮಾತ್ರವಲ್ಲ ವಿಶ್ವಾಸಿಗಳಿಗೆ ವಿರೋಧವಾಗಿ ಭಯಂಕರವಾದ ಇಚ್ಛೆಯ ಆತ್ಮಗಳನ್ನು, ವ್ಯಭಿಚಾರದ ಆತ್ಮಗಳನ್ನೂ ಕಳುಹಿಸುವನು.

ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಲ್ಲುವ ಪ್ರತಿಯೊಬ್ಬ ವಿಶ್ವಾಸಿಯೂ ಸೈತಾನನ ಮೇಲೆ ಜಯಗಳಿಸುವನು. ಯಾಕೆಂದರೆ "ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು. ನಿನ್ನ ಕಾಲು ಕಲ್ಲಿಗೆ ತಗಲದಂತೆ ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು. ಪ್ರಾಯದ ಸಿಂಹವನ್ನೂ, ಘಟಸರ್ಪವನ್ನೂ ತುಳಿದುಬಿಡುವಿ" (ಕೀರ್ತ.91:11,12,13) ಎಂಬುದು ದೇವರ ವಾಗ್ದಾನವಾಗಿದೆ.

**ವಾಗ್ದಾನ ವಚನ – ಯೆಶಾಯ 60:17–18**

*"ಸಮಾಧಾನವನ್ನು ನಿನಗೆ ಅಧಿಪತಿಯನ್ನಾಗಿ ಧರ್ಮವನ್ನು ನಿನಗೆ ಅಧಿಕಾರಿಯನ್ನಾಗಿ ನೇಮಿಸುವೆನು. ನಿನ್ನ ದೇಶದಲ್ಲಿ ಬಲಾತ್ಕಾರದ ಸುದ್ದಿಯೇ ಕಿವಿಗೆ ಬೀಳದು. ನಿನ್ನ ಪ್ರಾಂತದೊಳಗೆ ಭಂಗನಾಶನಗಳ ವಾರ್ತೆಯೇ ಕೇಳಿಬರುವದಿಲ್ಲ."*

## ಕ್ರಿಸ್ತನ ಪುನರುತ್ಥಾನ

"ಆತನು ಇಲ್ಲಿ ಇಲ್ಲ; ತಾನು ಹೇಳಿದಂತೆ ಎದ್ದಿದ್ದಾನೆ." (ಮತ್ತಾ. 28:6).

ನಾವು ಆಚರಿಸುವ ಮಹತ್ತರವಾದ ಹಬ್ಬ ಕ್ರಿಸ್ತಜಯಂತಿಯೇ? ಕ್ರಿಸ್ತೇಸುವಿನ ಪುನರುತ್ಥಾನದ ಹಬ್ಬವೇ ಎಂದು ಕೇಳಿದರೆ ನಿಮ್ಮ ಉತ್ತರವೇನು? ಹೌದು, ಕ್ರಿಸ್ತೇಸುವಿನ ಪುನರುತ್ಥಾನದ ಜಯಘೋಷವು ನಮ್ಮನ್ನು ಪರವಶಗೊಳಿಸುತ್ತದೆಯಲ್ಲವೇ? ಕ್ರಿಸ್ತನ ಪುನರುತ್ಥಾನವು ಆತನು ದೇವಕುಮಾರನೆಂದು ಬಲವಾಗಿ ಸಾರಿತು. ಕೋಟಿಗಟ್ಟಲೆ ಸಮಾಧಿಗಳ ಮಧ್ಯದಲ್ಲಿ ಯೇಸುಕ್ರಿಸ್ತನ ಸಮಾಧಿ ತೆರೆದಿದೆ. "ಆತನು ಇಲ್ಲಿ ಇಲ್ಲ; ತಾನು ಹೇಳಿದಂತೆ ಎದ್ದಿದ್ದಾನೆ" ಎಂದು ಸಾರುತ್ತಿದೆ.

ಕ್ರಿಸ್ತನ ಪುನರುತ್ಥಾನವು ನಮ್ಮ ಆತ್ಮೀಕ ಜೀವಿತಕ್ಕೆ ಒಂದು ಆಳವಾದ ಅಸ್ತಿವಾರವಾಗಿದೆ. ಆ ಮಹಿಮೆಯ ಅಸ್ತಿವಾರದ ಮೇಲೆ ನಮ್ಮ ಆತ್ಮೀಕ ಜೀವಿತ ಕಟ್ಟಲ್ಪಡುವಾಗ ಯಾವ ಬಲವೂ ನಮ್ಮನ್ನು ಕದಲಿಸಲಾರದು. ಅಪೊ. ಪೇತ್ರನು ಆ ಅಸ್ತಿವಾರವಾದ ಬಂಡೆ ಕ್ರಿಸ್ತನೇ ಎಂದು ಕಂಡುಕೊಂಡಿದ್ದರಿಂದಲೇ, ಪರಲೋಕ ರಾಜ್ಯದ ಬೀಗದ ಕೈಗಳನ್ನು ಪಡೆದುಕೊಂಡನು. ಶೋಧನೆಗಳು ಬಂದವು, ಕ್ರಿಸ್ತನಂಬಿಕೆಯಲ್ಲಿ ಹಿಂಜಾರಿ ಹೋಗುವ ಪರಿಸ್ಥಿತಿಯೂ ಉಂಟಾಯಿತು. ಆದರೆ ಜೀವಸ್ವರೂಪನಾದ ದೇವ ಕುಮಾರನನ್ನು ಅರಿಕೆ ಮಾಡಿದ ಪೇತ್ರನನ್ನು ಆ ಬಂಡೆ (ಕ್ರಿಸ್ತನಂಬಿಕೆ) ಎಬ್ಬಿಸಿ ದೃಢವಾಗಿ ನಿಲ್ಲಿಸಿತು (ಮತ್ತಾ. 16:19). ಫರಿಸಾಯರು, ಸದ್ದುಕಾಯರು, ಯಾಜಕರು, ಕ್ರಿಸ್ತನನ್ನು ದೇವಕುಮಾರನೆಂದು ನಂಬಲಿಲ್ಲ. ಆದರೆ ಕ್ರಿಸ್ತನನ್ನು ಅಂಗೀಕರಿಸಿಕೊಂಡ ಪೌಲನು ರೋಮಾಯ ಸಭೆಗೆ ಬರೆಯುವಾಗ, "ಆತನು ದಾವೀದನ ಸಂತಾನದಲ್ಲಿ ಹುಟ್ಟಿದವನೂ, ಪವಿತ್ರವಾದ ಆತ್ಮವುಳ್ಳವನಾಗಿದ್ದು, ಸತ್ತಮೇಲೆ ಜೀವಿತನಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನೆಂದು ಸಾಕ್ಷಿ ಹೇಳುತ್ತಾನೆ." (ರೋಮಾ. 1:5).

ನಮ್ಮ ರಕ್ಷಣೆಗೆ ದೇವರು ಏರ್ಪಡಿಸಿರುವ ಮಾರ್ಗ ಕ್ರಿಸ್ತೇಸುವಿನ ಮರಣ ಮತ್ತು ಪುನರುತ್ಥಾನ. ಇದರ ಮೇಲೆ ಸೇವೆಯ ಅಸ್ತಿವಾರ ಹಾಕಲ್ಪಡುವಾಗ ಪವಿತ್ರಾತ್ಮನು ತಾನೇ ಸಹಾಯ ಮಾಡುವನು. ಸೇವೆಗೆ ದೊಡ್ಡ ಅಡ್ಡಿ ಸೈತಾನನು. ಸೈತಾನನ ಕ್ರಿಯೆಗಳನ್ನು ಲಯಪಡಿಸಲು ದೇವಕುಮಾರನು ಪ್ರತ್ಯಕ್ಷನಾದನು (1 ಯೋಹಾ. 3:8). ಅವನ ತಲೆಯನ್ನು ಶಿಲಬೆಯಲ್ಲಿ ಜಜ್ಜಿದಾನೆ. ಕ್ರಿಸ್ತನು ನಮಗಾಗಿ ಯುದ್ಧ ಮಾಡುತ್ತಾನೆ. ಆದ್ದರಿಂದ ಜಯ ನಮ್ಮದೇ.



## ಆತನು ಇಲ್ಲಿ ಎದ್ದಿದ್ದಾನೆ

ಬೋಧಕರಾದ ಓರಲ್ ರಾಬರ್ಟ್ಸ್ ಅವರು ಸೇವೆಯನ್ನು ಪ್ರಾರಂಭಿಸಿದ ದಿನಗಳಲ್ಲಿ ಯೇಸುಕ್ರಿಸ್ತನು ಪುನರುತ್ಥಾನವಾದ, ಖಾಲಿಯಾದ ಸಮಾಧಿಯನ್ನು ಕಾಣಲು ಹೋದರು. ಸಾಧಾರಣವಾಗಿ ಅಲ್ಲಿ ಬರುವಂಥ ವಿದೇಶಿ ಯಾತ್ರಿಕರು ಒಂದು ನಿಮಿಷದ ಒಳಗೆ ಹೋಗಿ ನೋಡಿ ಹಿಂದಿರುಗುತ್ತಿದ್ದರು. ಆದರೆ ಓರಲ್ ರಾಬರ್ಟ್ಸ್ ಒಳಗ ಹೋದಾಗ, ಉದ್ವೇಗಗೊಂಡವರಾಗಿ, ಆ ಸಮಾಧಿಯೊಳಗೆ ಹೊರಳಾಡಿ ಹೊರಳಾಡಿ ಪ್ರಾರ್ಥಿಸಲಾರಂಭಿಸಿದರು. ಈ ಸ್ಥಳದಲ್ಲಿ ನನ್ನ ಸ್ವಾಮಿಯ ಶರೀರ ಮಣ್ಣಲ್ಲಿ ಇಡಲ್ಪಟ್ಟಿತು. ಈ ಸ್ಥಳದಲ್ಲಿ ನನ್ನ ಸ್ವಾಮಿಗೆ ಸಮಾಧಿ ಮಾಡಿದರು. ಮಾತ್ರವಲ್ಲ ಈ ಸ್ಥಳದಲ್ಲಿ ಆತನ ಸತ್ತ ದೇಹದಲ್ಲಿ ಪುನರುತ್ಥಾನದ ಬಲ ಇಳಿಯಿತು ಎಂದುಕೊಳ್ಳುತ್ತಾ ಹೊರಳಾಡಿದರು.

ಹದಿನೈದು ನಿಮಿಷಗಳು ಕಳೆದರೂ ಅವರು ಹೊರಗೆ ಬಾರದ್ದು ಅವರೊಂದಿಗಿದ್ದವರಿಗೆ ಆಶ್ಚರ್ಯವನ್ನು ತಂದಿತು. ಕೊನೆಯಲ್ಲಿ ಅವರು ಹೊರಗೆ ಬಂದಾಗ ಅವರ ಮುಖವು ಕರ್ತನ ಪ್ರಭೆಯನ್ನು ತುಂಬಿದ್ದಿತು.

## ಅದ್ಭುತ ನಡೆಯಿತು

ಆ ಸಮಾಧಿಯನ್ನು ಕಾವಲು ಕಾಯುತ್ತಿದ್ದ ಕಾವಲಾಳಿಗೆ ಒಂದು ಕಾಲು ಇರಲಿಲ್ಲ. ಕೋಲೂರಿಕೊಂಡು ಕಷ್ಟದಿಂದ ನಡೆಯುತ್ತಿದ್ದನು. ಹೊರಗೆ ಬಂದಂಥ ಓರಲ್ ರಾಬರ್ಟ್ಸ್ ಬಳಿ ತನಗೆ ಏನಾದರೂ ಸಿಕ್ಕೀತೆಂದು ಅವರನ್ನು ನೋಡಿದನು. ಆದರೆ ಹೊರಗೆ ಬಂದಂಥ ಓರಲ್ ರಾಬರ್ಟ್ಸ್ ಆತ್ಮದಲ್ಲಿ ಅಭಿಮಾನ ತುಂಬಿದವರಾಗಿ ನೀನು ಪುನರುತ್ಥಾನವಾದ ಯೇಸುಕ್ರಿಸ್ತನ ಸಮಾಧಿಯನ್ನು ಕಾವಲು ಕಾಯುತ್ತಿ, ಆದರೆ ನಿನಗೆ ಒಂದು ಕಾಲು ಇಲ್ಲವಲ್ಲಾ, ಈಗ ನೀನು ನಂಬುವಿಯಾದರೆ ನಿನಗೆ ಹೊಸ ಕಾಲು ಬೆಳೆಯುವಂತೆ ಅಪ್ಪಣೆ ಕೊಡುತ್ತೇನೆ ಎಂದರು. ಕೂಡಲೇ ದೇವ ಮಹಿಮೆ ಅವನ ಮೇಲೆ ಇಳಿಯಿತು, ತುಂಡರಿಸಲ್ಪಟ್ಟಿದ್ದ ತೊಡೆಯ ಭಾಗದಿಂದ ಹೊಸ ಕಾಲು ವೇಗವಾಗಿ ಬೆಳೆಯಲಾರಂಭಿಸಿತು, ಮತ್ತೊಂದು ಕಾಲಿನ ಸಮ ಬೆಳೆಯಿತು. ಕರ್ತನು ಅದ್ಭುತ ಮಾಡಿದನು.

"ನನ್ನ ಕರ್ತನಾದ ಕ್ರಿಸ್ತಯೇಸುವನ್ನರಿಯುವದೇ ಅತಿ ಶ್ರೇಷ್ಠವಾದದ್ದೆಂದು ತಿಳಿದು.... ಆತನನ್ನೂ ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ...... ತಿಳಿದುಕೊಂಡು ಎಂದು ಅಪೊ.ಪೌಲನು ಹೇಳುತ್ತಾನೆ" (ಫಿಲಿ. 3:8–10).

## ತಾಯಿಯ ಪ್ರೀತಿ

ಸ್ಕಾಟ್‌ಲ್ಯಾಂಡ್ ಬೆಟ್ಟ ಪ್ರದೇಶದಲ್ಲಿರುವ ಒಂದು ದೊಡ್ಡ ಹದ್ದನ್ನು ಕುರಿತು ಒಂದು ಕಥೆ ಹೇಳುವರು. ಆ ಹದ್ದು ಒಂದು ದಿನ ಹಾರಾಡುತ್ತಾ ಬಂದಾಗ, ಅಲ್ಲಿ ಒಂದು ಕೂಸು ತೊಟ್ಟಿಲಲ್ಲಿ ಇರುವದನ್ನು ನೋಡಿ ಅದನ್ನು ಎತ್ತಿಕೊಂಡು ಬೆಟ್ಟದ ಶಿಖರದ ಮೇಲೆ ಇಟ್ಟುಬಿಟ್ಟಿತು. ಆ ಮಗುವಿನ ತಾಯಿ ಹುಚ್ಚಳಂತೆ ಅಲೆದಳು. ಆ ಗ್ರಾಮದವರು ಹೆದರಿ ನಡುಗಿದರು. ಅವರು ಬೆಟ್ಟದ ಬುಡದಲ್ಲಿ ಕೂಡಿ ಮಗುವನ್ನು ತರುವ ಬಗ್ಗೆ ಆಲೋಚಿಸಿದರು. ನಾನು ತರುತ್ತೇನೆಂದು ಒಬ್ಬ ಬಲಶಾಲಿ ಬೆಟ್ಟವನ್ನೇರಿದನು. ಅರ್ಧ ಕೂಡ ಹತ್ತಲಾರದೆ ಇಳಿದುಬಿಟ್ಟನು. ಬೆಟ್ಟ ಹತ್ತುವವನ್ನು ತರುತ್ತೇನೆಂದು ಹೋಗಿ ಅಂಥವನನ್ನು ಕರೆತಂದನು. ಆದರೆ ಅವನಿಂದಲೂ ಹತ್ತಲಾಗಲಿಲ್ಲ. ಆಗ ಒಬ್ಬ ಹೆಣ್ಣುಮಗಳು ಬಂದಳು. ಅವಳನ್ನು ಯಾರೂ ತಡೆಯಲಾಗಲಿಲ್ಲ. ಅವಳು ಬೆಟ್ಟದ ಮೇಲೆ ಹತ್ತಿ ಮಗುವು ಇರುವ ಸ್ಥಳವನ್ನು ಕಂಡುಹಿಡಿದು ಅದನ್ನು ತೆಗೆದುಕೊಂಡು ಬಂದಳು. ಆ ಹೆಣ್ಣು ಮಾಡಿದ್ದನ್ನು ಬೆಟ್ಟ ಹತ್ತುವವನೂ ಗ್ರಾಮವಾಸಿಯೂ ಮಾಡಲಾಗಲಿಲ್ಲ ಏಕೆ? ಆ ಹೆಣ್ಣುಮಗಳೇ ಮಗುವಿನ ತಾಯಿ! ಶಾಶ್ವತ ಪ್ರೀತಿ ಎಂಬ ಹಗ್ಗದಿಂದ ಅವಳು ಮಗುವಿನೊಂದಿಗೆ ಕಟ್ಟಲ್ಪಟ್ಟಿದ್ದಳು. ಆ ತಾಯಿಯ ಪ್ರೀತಿಗಿಂತಾ ಯೇಸುಕ್ರಿಸ್ತನ ಪ್ರೀತಿ ಹೆಚ್ಚಿನದು.

## ನಾವು ಸಂತೋಷವಾಗಿರಲು ನಮಗೆ ಏಳು ಸಂಗತಿಗಳಿವೆ

1. ನಮ್ಮ ಹೆಸರುಗಳನ್ನು ಪರಲೋಕದಲ್ಲಿ ಬರೆದಿರುತ್ತವೆ ಎಂದು ಸಂತೋಷ ಪಡಿರಿ (ಲೂಕ. 10:20), ಪ್ರಕ. 3:5, ಕೀರ್ತ. 69:28, ಇಬ್ರಿ. 12:23
2. ನಾವು ಪಡೆದಿರುವ ದೀಕ್ಷಾಸ್ನಾನಕ್ಕಾಗಿ (ಅಪೊ. 8:39).
3. ನಾವು ಪವಿತ್ರಾತ್ಮನನ್ನು ಹೊಂದಿರುವದಕ್ಕಾಗಿ (ರೋಮಾ. 14:17). ಅಪೊ. 2:14,17 ರೋಮಾ. 5:5 1 ಥೆಸ. 1:6
4. ಕ್ರಿಸ್ತನ ನಿಮಿತ್ತ ಬಾಧೆಗಳಲ್ಲಿ ಪಾಲುಗಾರರಾಗಿರಲು (1 ಪೇತ್ರ. 4:13–16) ಮತ್ತ 5:11,12 2 ತಿಮೊ. 2:12 1 ಪೇತ್ರ. 1:6–7
5. ಆತ್ಮಗಳನ್ನು ನಾವು ಆದಾಯಪಡಿಸುವ ಕಾರಣ (1 ಥೆಸ. 2:19,20) ಜ್ಞಾನೋ. 11:30 ದಾನಿ. 12:3 ಯಾಕೋ. 5:19,20
6. ನಮಗೆ ಸಂತೋಷ ಕೊಡುವ ಕರ್ತನ ಸನ್ನಿಧಾನಕ್ಕಾಗಿ (ಕೀರ್ತ. 16:11). ಅಪೊ. 2:25,26 ಕೀರ್ತ. 65:4
7. ನಾವು ಪುನಃ ಯೇಸುವನ್ನು ಕಾಣುತ್ತೇವಾದ್ದರಿಂದ (ಅಪೊ. 1:11). ಪ್ರಕ. 22:7, ಪ್ರಕ. 22:20



## ಪುನರುತ್ಥಾನದ ಕರ್ತನು ಯಾರ್ಯಾರಿಗೆ ಯಾವ ಸಮಯದಲ್ಲಿ ಕಾಣಿಸಿಕೊಂಡನು

1. ಮಗ್ದಲದ ಮರಿಯಳಿಗೆ – ಯೋಹಾ. 20:14–18
2. ಸಮಾಧಿಯ ಬಳಿಯಿಂದ ಹಿಂದಿರುಗುತ್ತಿದ್ದ ಸ್ತ್ರೀಯರಿಗೆ ಕಾಣಿಸಿಕೊಂಡನು. – ಮತ್ತಾ. 28:8,9
3. ಪೇತ್ರನಿಗೆ ಕಾಣಿಸಿಕೊಂಡನು. – ಲೂಕ. 24:34
4. ಎಮ್ಮಾಹುವಿಗೆ ಹೋಗುತ್ತಿದ್ದ ಶಿಷ್ಯರಿಗೆ ಸಂಜೆಯ ವೇಳೆಯಲ್ಲಿ ಕಾಣಿಸಿಕೊಂಡನು. – ಲೂಕ. 24:13–31
5. ತೋಮನ ಹೊರತು ಇತರ ಶಿಷ್ಯರಿಗೆ ಕಾಣಿಸಿಕೊಂಡನು. ಯೋಹಾ.20:19–27
6. ತೋಮನಿದ್ದಾಗ ಶಿಷ್ಯರಿಗೆ ಕಾಣಿಸಿಕೊಂಡನು. – ಯೋಹಾ. 20:26–29.
7. ಗಲಿಲಾಯದಲ್ಲಿ ತಿಬೇರಿಯಾ ಸಮುದ್ರದ ಬಳಿ ಏಳುಮಂದಿ ಶಿಷ್ಯರಿಗೆ ಕಾಣಿಸಿಕೊಂಡನು. ಯೋಹಾ. 21:1–23
8. ಬೆಟ್ಟದ ಮೇಲೆ ಅಪೊಸ್ತಲರಿಗೂ ಮತ್ತು 500 ಮಂದಿಗಿಂತ ಹೆಚ್ಚು ಜನರಿಗೆ ಕಾಣಿಸಿಕೊಂಡನು. 1 ಕೊರಿಂಥ 15:6.
9. ಯೆರೂಸಲೇಮಿನಲ್ಲಿ ಮತ್ತು ಬೇಥಾನ್ಯದಲ್ಲಿ ಯಾಕೋಬನಿಗೆ ಕಾಣಿಸಿಕೊಂಡನು. 1 ಕೊರಿಂಥ 15:7.
10. ಹನ್ನೊಂದು ಮಂದಿ ಶಿಷ್ಯರಿಗೆ – ಮತ್ತಾ. 28:16–20 ದರ್ಶನ ಕೊಟ್ಟನು.
11. ಅಪೊ. ಪೌಲನಿಗೆ ದಮಸ್ಕದ ಬಳಿ. – ಅಪೊ. ಕೃ. 9:3–6.
12. ದೇವಾಲದಯಲ್ಲಿ ಅ.ಪೌಲನಿಗೆ ದರ್ಶನ ಕೊಟ್ಟನು. – ಅಪೊ ಕೃತ್ಯ 22:17–21.
13. ಯೆರೂಸಲೇಮಿನ ಹೊರಗೆ ಸ್ತೆಫನನಿಗೆ – ಅಪೊ ಕೃ. 7:56.
14. ಪತ್ಮೋಸ್ ದ್ವೀಪದಲ್ಲಿ ಯೋಹಾನನಿಗೆ – ಪ್ರಕಟಣೆ 1:10–19.

## ಪ್ರಾರ್ಥನೆಯ ಬಲದಿಂದ ಸ್ಥಾಪಿತವಾದ ಸತ್ಯವೇದ ಕಾಲೇಜ್

ಒಬ್ಬ ತಾಯಿಯು ತನ್ನ ಮಗನು ದೇವರ ಸೇವಕನಾಗಬೇಕೆಂದು ಪ್ರಾರ್ಥಿಸುತ್ತಿದ್ದಳು. ಆ ಹುಡುಗನೂ ಸಹ ಚಿಕ್ಕಂದಿನಿಂದಲೂ ಒಳ್ಳೆಯ ಗುಣ ನಡತೆ ನಂಬಿಕೆಯುಳ್ಳವನಾಗಿ ಬೆಳೆದು ಬಂದನು. ಅವನು ಸೇವಕನಾಗಲು ಬಯಸಿದಾಗ ಅವನಿಗೆ ಕರ್ತನ ಮಾರ್ಗದರ್ಶನ ದೊರೆಯಲಿಲ್ಲವಾದ ಕಾರಣ ಒಂದು ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿದನು. ಆದರೆ ಕ್ರಿಸ್ತ ನಂಬಿಕೆಯಿಂದ ಹಿಂಜಾರಿಹೋಗಲಿಲ್ಲ. ಸ್ವಲ್ಪ ಸ್ವಲ್ಪವಾಗಿ ಉನ್ನತಿಗೆ ಬಂದನು. ಒಬ್ಬ ಶ್ರೀಮಂತನಾದನು. ಅವನ ಮರಣದ ನಂತರ ತನ್ನ ಹಣ ಆಸ್ತಿ ಎಲ್ಲವನ್ನೂ ಸೇವೆಗೆಂದು ಉಯಿಲುಮಾಡಿಟ್ಟಿದ್ದನು. ಆ ಹಣದಿಂದ ಅತ್ಯುತ್ತಮವಾದ "ಕೆಂಟಕಿ ಸತ್ಯವೇದ ಕಲಾಶಾಲೆ" ಸ್ಥಾಪಿತವಾಯಿತು. ಇದರ ಮೂಲಕ ಅನೇಕ ದೇವ ಸೇವಕರು ಹೊರಬಂದರು. ಕರ್ತನ ನಡೆಸುವಿಕೆ ಯಾವಾಗಲೂ ಒಳ್ಳೇಯದಾಗಿಯೇ ಇರುವದು. ಆದ್ದರಿಂದ ಪ್ರಾರ್ಥನೆ ಮಾಡಿರಿ, ಕರ್ತನ ನಡೆಸುವಿಕೆಗೆ ಅನುಗುಣವಾಗಿ ನಡೆದುಕೊಳ್ಳಿರಿ.

# ನಮ್ಮ ದೇಶದ ಸುದ್ದಿಗಳು
## (INDIAN NEWS)

### 1. ವಿಶ್ವಸಂಸ್ಥೆ ಭದ್ರತಾ ಮಂಡಳಿ ನಿಷ್ಕ್ರಿಯ : ಭಾರತ ಆಕ್ಷೇಪ

ಭಯೋತ್ಪಾದನೆ ನಿಗ್ರಹ ಸಂಬಂಧ ಕೈಗೊಂಡ ಪ್ರಮುಖ ನಿರ್ಣಯಗಳನ್ನು ಜಾರಿಗೊಳಿಸುವಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ತೋರುತ್ತಿರುವ ನಿಷ್ಕ್ರಿಯತೆಯನ್ನು ಭಾರತ ತೀವ್ರವಾಗಿ ಟೀಕಿಸಿದೆ. ಇದೇ ವೇಳೆ ದಿಗ್ಬಂಧನ ನಿಯಮವನ್ನು ಉಲ್ಲಂಘನೆ ಮಾಡುತ್ತಿರುವುದನ್ನು ತಡೆಯುವಲ್ಲಿ ಮಂಡಳಿ ವಿಫಲವಾಗುತ್ತಿದೆ ಎಂದು ಆರೋಪಿಸಿದೆ.

### 2. ಅಪರಾಧಿ ಮೇಲೆ ಅನುಕಂಪ ಬೇಡ :

ಅಪರಾಧಿಗಳಿಗೆ ಶಿಕ್ಷೆ ಪ್ರಕಟಿಸುವಾಗ ಅನುಚಿತ ಅನುಕಂಪ ತೋರಿಸಬಾರದು ಎಂದು ಸುಪ್ರೀಂ ಕೋರ್ಟ್ ಎಲ್ಲಾ ಅಧೀನ ನ್ಯಾಯಾಲಯಗಳಿಗೆ ಸೂಚಿಸಿದೆ. ಅಪರಾಧಿಗಳ ಬಗ್ಗೆ ಮರುಕ ತೋರಿದರೆ ಕಾನೂನಿನ ಮೇಲೆ ಜನಸಾಮಾನ್ಯರು ಇಟ್ಟಿರುವ ವಿಶ್ವಾಸಕ್ಕೆ ಧಕ್ಕೆ ಬರುತ್ತದೆ ಎಂದು ನ್ಯಾಯಮೂರ್ತಿ ಎಂ.ವೈ.ಇಕ್ಬಾಲ್ ಮತ್ತು ಕುರಿಯನ್ ಜೋಸೆಫ್ ಅವರ ಪೀಠ ಎಚ್ಚರಿಸಿದೆ.

### 3. ಕುಂಬ್ಳೆಗೆ 'ಹಾಲ್ ಆಫ್ ಫೇಮ್' ಗೌರವ :

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಅನಿಲ್ ಕುಂಬ್ಳೆ ಭಾನುವಾರ ಪ್ರತಿಷ್ಠಿತ 'ಹಾಲ್ ಆಫ್ ಫೇಮ್' ಗೌರವಕ್ಕೆ ಭಾಜನರಾದರು. ಗುರುವಾರ ಅಂತರರಾಷ್ಟ್ರೀಯ ಕ್ರಿಯೆಟ್ ಸಮಿತಿ ಕುಂಬ್ಳೆ ಅವರ ಹೆಸರನ್ನು ಐಸಿಸಿ ಕ್ರಿಕೆಟ್ 'ಹಲ್ ಆಫ್ ಫೆಮ್' ಪಟ್ಟಿಗೆ ಸೇರ್ಪಡೆ ಮಾಡಿತು. ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ನಡೆದ ಭಾರತ ಮತ್ತು ದಕ್ಷಿಣ ಕ್ರಿಕೆಟ್ ತಂಡಗಳ ನಡುವಿನ ವಿಶ್ವಕಪ್ ಪಂದ್ಯಕ್ಕೂ ಮುನ್ನ ಐಸಿಸಿ ನಿರ್ದೇಶಕ ಮತ್ತು ಕ್ರಿಕೆಟ್ ಆಸ್ಟ್ರೇಲಿಯಾ ಅಧ್ಯಕ್ಷ ವಾಲಿ ಎಡ್ವರ್ಡ್ಸ್ ಅವರು ಕುಂಬ್ಳೆಗೆ 'ಹಾಲ್ ಆಫ್ ಫೇಮ್' ಕ್ಯಾಪ್ ನೀಡಿ ಗೌರವಿಸಿದರು.

### 4. ಹುಲಿ ಸಂಖ್ಯೆ ಏರಿಕೆ ಲೆಕ್ಕಾಚಾರದಲ್ಲೇ ದೋಷ :

ಭಾರತ ಹುಲಿ ಸಂಖ್ಯೆಯಲ್ಲಿ ಏರಿಕೆಯಾಗಿದೆ ಎಂಬ ಸಮೀಕ್ಷೆ ತಪ್ಪಾಗಿರುವ ಸಂಭವ ಇದೆ. ಇದು ದೋಷಗಳಿಂದ ಕೂಡಿದ ಸಂಶೋಧನಾ ವಿಧಾನದ ಫಲಿತಾಂಶ ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಅಧ್ಯಯನವೊಂದು ಹೇಳಿದೆ.

### 5. ಆಲಮಟ್ಟಿ : ವಿಶ್ವದ ಅತಿ ದೊಡ್ಡ ಅಕ್ಷರ ಫಲಕ :

ನೀರಾವರಿ, ಪ್ರವಾಸಿ ತಾಣದಿಂದ ಪ್ರಸಿದ್ಧವಾಗಿರುವ ಆಲಮಟ್ಟಿ ಜಲಾಶಯವು ಈಗ ಮತ್ತೊಂದು ದಾಖಲೆಗೆ ಸಿದ್ಧವಾಗುತ್ತಿದೆ. ಜಲಾಶಯದ ಎಡಭಾಗದ ಕಾಂಕ್ರಿಟ್ ಜಾಗದಲ್ಲಿ ಎಲ್ಲರಿಗೂ ಕಾಣುವಂತೆ ಅಳವಡಿಸಲಾಗುತ್ತಿರುವ ಲೋಹದ ಅಕ್ಷರ ಫಲಕ (ಮೆಟಾಲಿಕ್ ಸೈನ್ ಬೋರ್ಡ್) ವಿಶ್ವದಲ್ಲೇ ದೊಡ್ಡ ಗಾತ್ರದ್ದಾಗಿದ್ದು, ಗಿನ್ನೆಸ್ ಬುಕ್ ಆಫ್ ರೆಕಾರ್ಡ್ ಹಾಗೂ ಲಿಮ್ಕಾ ಬುಕ್ ಆಫ್ ರೆಕಾರ್ಡ್ ಸೇರಲಿದೆ.





# ಹೊರ ದೇಶದ ಸುದ್ದಿಗಳು
## (FOREIGN NEWS)

### 1. ಡೆಂಗೆ : ಪರಿಣಾಮಕಾರಿ ಪ್ರತಿಜೈವಿಕ :

ಡೆಂಗೆ ಜ್ವರವನ್ನು ಉಪಶಮನ ಮಾಡುವ ಪರಿಣಾಮಕಾರಿ ಪ್ರತಿಜೈವಿಕವನ್ನು (ಆ್ಯಂಟಿಬಾಡಿ) ವಿಜ್ಞಾನಿಗಳು ಸಂಶೋಧಿಸಿದ್ದಾರೆ. '5ಜೆ7' ಹೆಸರಿನ ಈ ರೋಗ ನಿರೋಧಕ ಕೇವಲ 109 ಗ್ರಾಂ ಬಳಕೆಯಿಂದ ರೋಗವನ್ನು ತಟಸ್ಥಗೊಳಿಸಲು ಸಾಧ್ಯವಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

### 2. ಅಂಗವಿಕಲರಿಗೆ ಸ್ಮಾರ್ಟ್‌ಫೋನ್

ಅಂಗವೈಕಲ್ಯ ಇರುವವರಿಗೆ ಅನುಕೂಲವಾಗುವಂತಹ ಕೈ ಅಗತ್ಯವಿಲ್ಲದೆ ಬಳಸಬಹುದಾದ ವಿಶ್ವದ ಮೊದಲ ಸ್ಮಾರ್ಟ್ ಫೋನನ್ನು ಇಸ್ರೇಲಿ ಕಂಪೆನಿಯೊಂದು ತಯಾರಿಸಿದೆ. ಸಿಸೆಮ್ ಎನೆಬಲ್ ಕಂಪೆನಿ ಇದನ್ನು ಅಭಿವೃದ್ಧಿಗೊಳಿಸಿದ್ದು, ಬೆನ್ನು ಮೂಳೆ ತೊಂದರೆ, ನರಕೋಶ ವೈಫಲ್ಯ, ಪಾರ್ಶ್ವವಾಯು ಅಥವಾ ಇನ್ನಿತರೆ ಯಾವುದೇ ದೌರ್ಬಲ್ಯದಿಂದಾಗಿ ಕೈ ಮತ್ತು ಬೆರಳಿನ ಚಲನೆಗೆ ತೊಂದರೆಯಾದವರು ಉಪಯೋಗಿಸುವಂತೆ ಈ ಸ್ಮಾರ್ಟ್‌ಫೋನನ್ನು ವಿನ್ಯಾಸಗೊಳಿಸಲಾಗಿದೆ.

### 3. ಉಗ್ರರ ವಿರುದ್ಧ ಹೋರಾಟ : 3 ವರ್ಷ ಕಾಲಾವಕಾಶ ಕೋರಿ ಒಬಾಮ:

ಇಸ್ಲಾಮಿಕ್ ಸ್ಟೇಟ್ ಉಗ್ರಗಾಮಿಗಳ ವಿರುದ್ಧ ನಡೆಸುತ್ತಿರುವ ಸೇನಾ ಕಾರ್ಯಾಚರಣೆಯನ್ನು ಇನ್ನೂ ಮೂರು ವರ್ಷಗಳ ಕಾಲ ಮುಂದುವರಿಸಲು ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಕಂಗ್ರೆಸ್‌ನ ಅನುಮತಿ ಕೋರಿದ್ದಾರೆ.

### 4. ಉಗ್ರರ ವಿರುದ್ಧ ಕಠಿಣ ಕ್ರಮಕ್ಕೆ ಪಾಕಿಸ್ತಾನ ಚಿಂತನೆ :

ಮುಂಬೈ ದಾಳಿಯ ಸಂಚುಕೋರ ಹಫೀಸ್ ಸಯೀದ್ ನೇತೃತ್ವದಲ್ಲಿ ಜಮಾತ್ ಉದ್ ದವಾ (ಜೆಯುಡಿ) ಮತ್ತು ಆಫ್ಘಾನಿಸ್ತಾನ ಮೂಲಕ ಹಖ್ಖಾನಿ ಉಗ್ರಗಾಮಿ ಸಂಘಟನೆಗಳನ್ನು ನಿಷೇಧಿಸಲು ಪಾಕಿಸ್ತಾನ ಚಿಂತನೆ ನಡೆಸಿದೆ. ಪೆಶಾವರ ಶಾಲೆಯ ಮೇಲೆ ಉಗ್ರರ ದಾಳಿಯ ನಂತರ ಆ ದೇಶದ ಭದ್ರತಾ ನೀತಿಯಲ್ಲಿ ಆಗಿರುವ 'ಭಾರಿ ಪರಿವರ್ತನೆ"ಯನ್ನು ಇದು ಸೂಚಿಸುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

### 5. ಪೈಲಟ್ ಸೆಲ್ಫಿ ಗೀಳಿಗೆ ವಿಮಾನ ಪತನ :

ವಿಮಾನ ಕಾಕ್‌ಪಿಟ್‌ನಲ್ಲಿ ಪೈಲಟ್ ಸೆಲ್ಫಿ ತೆಗೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಪುಟ್ಟ ವಿಮಾನ ಪತನಗೊಂಡಿತ್ತು. ಈ ಅಪಘಾತಕ್ಕೆ ಪೈಲಟ್ ಸೆಲ್ಫಿ ಗೀಳು ಕಾರಣ ಇರಬಹುದು ಎಂದು ಅಮೆರಿಕದ ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಕಳೆದ ವರ್ಷ ಮೇ 31ರಂದು 'ಸೆಸ್ನಾ 150ಕೆ' ವಿಮಾನ ಬಿದ್ದು, ಪೈಲಟ್ ಸ್ಥಳದಲ್ಲೇ ಮೃತಪಟ್ಟಿದ್ದ. ಪೈಲಟ್ ತನ್ನ ಸ್ಮಾರ್ಟ್ ಫೋನ್‌ನಲ್ಲಿ ಸೆಲ್ಫಿ ತೆಗೆದುಕೊಳ್ಳುತ್ತಿದ್ದರಿಂದ ಅವಘಡ ಸಂಭವಿಸಿದೆ ಎಂದು ಕಾಕ್‌ಪಿಟ್‌ನಲ್ಲಿ ದಾಖಲಾಗಿದ್ದ ವಿಡಿಯೋ ಪರಿಶೀಲಿರುವ ರಾಷ್ಟ್ರೀಯ ಸಾರಿಗೆ ಸುರಕ್ಷತೆ ಮಂಡಳಿ ತಿಳಿಸಿದೆ.

# ನಿಮ್ಮ ಚಿಂತನೆಗಾಗಿ

* ಜೀವಿತವೆಂಬ ಕಠಿಣವಾದ ಪ್ರಯಾಣದಲ್ಲಿ ನಿನ್ನನ್ನು ಸುಖವಾಗಿ ಹೊತ್ತುಕೊಂಡು ಹೋಗುವ ಪರಲೋಕ ವಾಹನವೇ ಪವಿತ್ರಾತ್ಮನು.
* ಗಡಿಯಾರವನ್ನು ನಿಲ್ಲಿಸುವದಾದರೆ ಕಾಲದ ಓಟವು ನಿಲ್ಲುವದಿಲ್ಲ. ಕಾಣದವನಂತಿರುವದಾದರೆ ಚಿಂತೆಗಳು ಅಗಲುವದಿಲ್ಲ.
* ಪಾಪವು ಒಳಗೆ ಮರೆಯಾಗಿರುವಾಗ, ಜೀವಿತದಲ್ಲಿ ಬಹಿರಂಗವಾಗಿಯೇ ಸೋಲುಗಳುಂಟಾಗುವದು.
* ಕ್ರಿಸ್ತನಲ್ಲಿದ್ದೇನೆಂದು ನಿನ್ನ ಬಾಯಿ ಹೇಳಲಿ, ಕ್ರಿಸ್ತನು ನಿನ್ನೊಂದಿಗಿರುವದನ್ನು ಬೇರೆಯವರ ಕಣ್ಣುಗಳು ಕಾಣಲಿ.
* ಆಶಿಸುವದನ್ನು ಹೊಂದಬೇಕೆಂಬ ಆಸೆಯಿಂದ ಮಾನವನು ಅನೇಕ ಕಷ್ಟಗಳನ್ನು ಅನುಭವಿಸಬೇಕಾಗುವದು.

## ಜ್ಞಾನದ ಮನೆಯ ಏಳು ಕಂಬಗಳು

*ಜ್ಞಾನವೆಂಬಾಕೆಯು ಏಳು ಕಂಬಗಳನ್ನು ಕಡಿದು*
*ತನ್ನ ಮನೆಯನ್ನು ಕಟ್ಟಿಕೊಂಡಿದ್ದಾಳೆ" (ಜ್ಞಾನೋ. 9:11)*

* ಮೊದಲನೇ ಕಂಬ : ನಂಬಿಕೆ – ಸ್ವಬುದ್ಧಿಯನ್ನೇ ಆಧಾರ ಮಾಡಿಕೊಳ್ಳದೆ ಪೂರ್ಣ ಮನಸ್ಸಿನಿಂದ ಕರ್ತನಲ್ಲಿ ಭರವಸವಿಡು" (ನಂಬಿಕೆಯಿಡು) (ಜ್ಞಾನೋ. 3:5).
* ಎರಡನೇ ಕಂಬ : ನಿರ್ದೋಷ – "ನಿರ್ದೋಷದ ನಡತೆಯುಳ್ಳವನು ನಿರ್ಭಯವಾಗಿ ನಡೆಯುವನು." (ಜ್ಞಾನೋ. 10:9).
* ಮೂರನೇ ಕಂಬ : ಉದಾರ ಗುಣ – ಉದಾರಿಯು ಪುಷ್ಟನಾಗುವನು; "ನೀರು ಹಾಯಿಸುವವನಿಗೆ ನೀರು ಸಿಕ್ಕುವದು" (ಜ್ಞಾನೋ. 11:25).
* ನಾಲ್ಕನೆಯ ಕಂಬ : ಚುರುಕುತನ
"ಚುರುಕುಗೈಯವನಿಗೆ ರಾಜ್ಯಾಧಿಕಾರ" – (ಜ್ಞಾನೋ. 12:24).
* ಐದನೇ ಕಂಬ : ಒಳ್ಳೆಯ ಮಾತು
'ಶಿಷ್ಟನ ಬಾಯಿ ಜೀವನ ಬುಗ್ಗೆ" – (ಜ್ಞಾನೋ. 10:11).
* ಆರನೇ ಕಂಬ : ಸ್ನೇಹ – "ಹೃದಯಶುದ್ಧಿಯನ್ನೇ ಅಪೇಕ್ಷಿಸುವ ಸವಿಮಾತಾಡುವ ಮನುಷ್ಯನಿಗೆ ರಾಜನ ಸ್ನೇಹವು ದೊರೆಯುವದು" (ಜ್ಞಾನೋ. 22:11).
* ಏಳನೇ ಕಂಬ : "ನಿನ್ನ ಮಾರ್ಗವು ಅವಳಿಗೆ ದೂರವಾಗಿರಲಿಲ್ಲ" (ಜ್ಞಾನೋ.5:8) ವ್ಯಭಿಚಾರಕ್ಕೂ ಜಾರತ್ವಕ್ಕೂ ದೂರವಿದ್ದು ತನ್ನನ್ನು ಕಾಪಾಡಿಕೊಳ್ಳುವವರೇ ಕರ್ತನ ಆಶೀರ್ವಾದಕ್ಕೆ ಪಾತ್ರರು.

ಒಂದು ಮನೆಯ ಏಳು ಕಂಬಗಳಲ್ಲಿ ಯಾವ ಕಂಬಕ್ಕೆ ನಾಶವುಂಟಾದರೂ ಅದನ್ನು ಸರಿಪಡಿಸಿಬಿಡಬಹುದು. ಆದರೆ ಪವಿತ್ರತ್ವವೆಂಬ ಕಂಬಕ್ಕೆ ಧಕ್ಕೆ ಉಂಟಾದರೆ ಅದನ್ನು ಸರಿಪಡಿಸುವದು ಬಹಳ ಕಷ್ಟ. ದೇವಮಗುವೇ ಪವಿತ್ರತ್ವವನ್ನು ಕಾಪಾಡಿಕೊ.



ಏಪ್ರಿಲ್ 1

## ದೇವರ ವಾಕ್ಯ!

ಬೆಳಿಗ್ಗೆ : ನ್ಯಾಯ. 14,15
ಸಂಜೆ : ಲೂಕ. 6:27–49

"ದೇವರ ವಾಕ್ಯವು ಸಜೀವವಾದದ್ದು. ಕಾರ್ಯಸಾಧಕವಾದದ್ದು ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು.... ಆಗಿದೆ" (ಇಬ್ರಿ. 4:12).

ಸತ್ಯವೇದ ವಾಕ್ಯವು ಹಲವು ಕಾರ್ಯಗಳಿಗೆ ಹೋಲಿಸಲಾಗಿದೆ. ಅದು ಕಾಲುಗಳಿಗೆ ದೀಪವೂ, ಮಾರ್ಗಕ್ಕೆ ಬೆಳಕೂ ಆಗಿದೆ. ಹಸು ಮಕ್ಕಳಿಗೆ ಹಾಲಿನಂತದ್ದು. ದೊಡ್ಡವರಿಗೆ ಗಟ್ಟಿಯಾದ ಅಹಾರ. ಎಲ್ಲರಿಗೂ ಅದು ಅನುದಿನದ ರೊಟ್ಟಿಯಾಗಿದೆ. ದೇವರ ವಾಕ್ಯ ಅಗ್ನಿಜ್ವಾಲೆಯಂತಿರುವದು. ಅದು ಆತ್ಮನ ಖಡ್ಗವಾಗಿಯೂ, ಬಂಡೆಯನ್ನು ಪುಡಿ ಮಾಡುವ ಚಮ್ಮಟಿಕೆಯಾಗಿಯೂ ಇರುವದು. ಮಾತ್ರವಲ್ಲ ದೇವ ವಾಕ್ಯವು ಜೇನಿನಂತೆ ಮಧುರವಾದದ್ದು. ಒಳ್ಳೆಯ ಫಸಲನ್ನು ಕೊಡುವ ಬೀಜವಾಗಿದೆ. ಚೊಕ್ಕ ಬಂಗಾರಕ್ಕಿಂತಲೂ ಅಮೂಲ್ಯವಾದದ್ದೂ ಆತ್ಮವನ್ನು ಉಜ್ಜೀವಿಸುವಂಥದ್ದೂ ಆಗಿದೆ. ಅದನ್ನು ಓದುವದು, ಧ್ಯಾನಿಸುವದು, ಅದರಂತೆ ನಡೆಯುವದು ಎಷ್ಟೋ ಭಾಗ್ಯಕರವಾದದ್ದು.

ಇಂಗ್ಲೆಂಡ್ ದೇಶದ ಮ್ಯೂಸಿಯಂನಲ್ಲಿ ಭಾರತ ದೇಶದಿಂದ ಒಯ್ಯಲ್ಪಟ್ಟ ದೊಡ್ಡ ಕೋಹಿನೂರ್ ವಜ್ರ ಇಡಲ್ಪಟ್ಟಿದೆ. ಆ ವಜ್ರಕ್ಕೆ ಹಲವು ಕೋನಗಳು ಉಂಟು. ಅದರ ಮೇಲೆ ಬೆಳಕು ಹಾಯಿಸುವಾಗ ಒಂದೊಂದು ಕೋನವೂ ಒಂದೊಂದು ವಿಧವಾದ ಬಣ್ಣವನ್ನು ಹೊರಸೂಸುವದು. ಸತ್ಯವೇದವು ಈ ಕೋಹಿನೂರು ವಜ್ರಕ್ಕಿಂತಲೂ ಶ್ರೇಷ್ಠವಾದದ್ದು, ಅಮೂಲ್ಯವಾದದ್ದು. ಪವಿತ್ರಾತ್ಮನು ತನ್ನ ಬೆಳಕನ್ನು ಸತ್ಯವೇದ ವಾಕ್ಯಗಳ ಮೇಲೆ ಬೀರುವಾಗ ಒಂದೊಂದು ಭಾಗವೂ ನಮ್ಮ ಆಂತರ್ಯವನ್ನು ಪರವಶಗೊಳಿಸುವದು. ಒಂದೊಂದು ವಾಕ್ಯಗಳೂ ತಮ್ಮದೇ ಆದ ಸತ್ಯಾಂಶಗಳನ್ನು ಪ್ರಕಟಿಸುವದು. ದೇವರ ವಾಕ್ಯಗಳ ಮುಖ್ಯತ್ವವನ್ನು ತಿಳಿಸುವ ಮೂರು ಕೀರ್ತನೆಗಳು ಸತ್ಯವೇದದಲ್ಲಿ ಉಂಟು. 1. ಮೊದಲನೇ ಕೀರ್ತನೆ, ಇದು ಸತ್ಯವೇದವನ್ನು ಓದುವದರಿಂದ ಸಿಗುವ ಭಾಗ್ಯ, 2. 19ನೇ ಕೀರ್ತನೆ, ಸತ್ಯವೇದ ವಾಕ್ಯಗಳ ಮಹಿಮೆಯನ್ನು ತಿಳಿಸುತ್ತದೆ. 3. ಕೀರ್ತನೆ 119, ಇದರ ಒಂದೊಂದು ವಾಕ್ಯಗಳೂ ದೇವರ ವಾಕ್ಯದಂತೆ ನಡೆಯುವದರಿಂದ ಸಿಗುವ ಆಶೀರ್ವಾದಗಳನ್ನೂ, ಮಹತ್ತುಗಳನ್ನೂ ತಿಳಿಸುವದು.

ದೇವಜನರೇ, ಪ್ರಪಂಚದಲ್ಲಿ ಪರಿಶುದ್ಧ ಜನರು ಬಯಸುವ ಪುಸ್ತಕವೆಂದರೆ ಅದು ಸತ್ಯವೇದ ಒಂದೇ. ಒಬ್ಬ ಮನುಷ್ಯನ ಲೌಕೀಕ ಹಾಗೂ ಆತ್ಮೀಕ ಜೀವಿತಕ್ಕೆ ಬೇಕಿರುವ ಮಾರ್ಗದರ್ಶನ ಈ ಪವಿತ್ರ ಪುಸ್ತಕದಲ್ಲಿ ಅಡಗಿರುವದು. ಇದು ಇಹಕ್ಕೂ ಪರಕ್ಕೂ ಮಾರ್ಗ ತೋರಿಸುವ ದೀಪವಾಗಿದೆ.

*ನೆನಪಿಗೆ : ಈ ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು (ಮತ್ತಾ. 7:24).*

ಏಪ್ರಿಲ್ 2

## ಕಾಲಿಗೆ ದೀಪ!

ಬೆಳಿಗ್ಗೆ : ನ್ಯಾಯ. 16,17,18
ಸಂಜೆ : ಲೂಕ. 7:1–35

"ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ, ನನ್ನ ದಾರಿಗೆ ಬೆಳಕೂ ಆಗಿದೆ" (ಕೀರ್ತ.119:105).

"ನಿನ್ನ ವಾಕ್ಯವು ನನ್ನ ಕಾಲಿಗೆ ದೀಪ" ಎಂದು ಕೀರ್ತನೆಗಾರನು ಹೇಳುತ್ತಾನೆ. ನಿಮ್ಮ ಕಾಲುಗಳು ಎಡವದಂತೆ, ಜಾರಿಬೀಳದಂತೆ ಇರಲು ನಿಮಗೆ ಬೆಳಕು ಅವಶ್ಯ. ಕೆಲವು ವೇಳೆ ಇರುಳು ಆವರಿಸುವದು. ಮರಣದ ಕಣಿವೆಯಲ್ಲಿ ನಡೆಯುವೆವು. ಆಗ ನಿಮಗೆ ದೇವರ ವಾಕ್ಯವೆಂಬ ಬೆಳಕು ಅವಶ್ಯ.

'ಎವರೆಡಿ' ಟಾರ್ಚ್‌ನ ಜಾಹಿರಾತನ್ನು ನೀವು ನೋಡಿರಬಹುದು. ಒಬ್ಬ ಮನುಷ್ಯನು ಟಾರ್ಚನ್ನು ಕತ್ತಲೆಯಲ್ಲಿ ಹತ್ತಿಸುವಾಗ ಅಲ್ಲಿ ಒಂದು ನಾಗರಹಾವು ಹೆಡೆ ಎತ್ತಿ ನಿಂತಿರುವ ದೃಶ್ಯವಿರುವದು. ಒಂದು ವೇಳೆ ಅವನು ಆ ಟಾರ್ಚನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗದೇ ಇದ್ದಿದ್ದರೆ ಅವನ ಸ್ಥಿತಿ ಏನಾಗುತ್ತಿತ್ತು? ಭಯಂಕರವಾದ ಹಾವು ಕಚ್ಚಿ ಮರಣಹೊಂದುತ್ತಿದ್ದನು. ನಾಗರ ಹಾವಿಗಿಂತಲೂ ಭಯಂಕರವಾದ ಹಾವು ಸೈತಾನನೆಂಬ ಘಟಸರ್ಪನು. ಸತ್ಯವೇದ ವಾಕ್ಯಗಳು ನಿಮ್ಮ ಕಾಲುಗಳಿಗೆ ದೀಪವಾಗಿ ಇರುವದಾದರೆ, ಸೈತಾನನ ಗುರುತನ್ನು ನಿಮ್ಮಿಂದ ಕಂಡುಕೊಳ್ಳಲು ಸಾಧ್ಯ. ದೀಪದ ಬೆಳಕಿನಲ್ಲಿ ಯಾವ ಯಾವ ವಿರೋಧಗಳು, ಅಪಾಯಗಳು ನಿಮ್ಮ ಮುಂದೆ ಇರುವವು. ಯಾವ ಮಾರ್ಗ ಸರಿಯಾದ ಮಾರ್ಗ ಎಂಬುದನ್ನೆಲ್ಲಾ ನೀವು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯ. ನೀವು ಎಡಕ್ಕಾಗಲಿ, ಬಲಕ್ಕಾಗಲಿ ತಿರುಗಿಕೊಳ್ಳುವಾಗ ಇದೇ ಮಾರ್ಗ, ಇದರಲ್ಲೇ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವದು (ಯೆಶಾ. 30:21) ಎಂದು ಸತ್ಯವೇದ ಹೇಳುತ್ತದೆ. ಕಾಲಿಗೆ ದೀಪವನ್ನು ಮಾರ್ಗದರ್ಶಿಯಾಗಿ ಕೊಟ್ಟ ದೇವರು ನೀವು ನಡೆಯಬೇಕಾದ ಮಾರ್ಗವನ್ನು ನಿಮಗೆ ತಿಳಿಯಪಡಿಸುವನು. ಅನೇಕರು ದೇವರ ವಾಗ್ದಾನಗಳನ್ನು, ಆಶೀರ್ವಾದಗಳನ್ನು ಪಡೆಯಲು ಬಯಸುತ್ತಾರೆ. ಆದರೆ ಅದನ್ನು ಪಡೆಯಬೇಕಾದ ಮಾರ್ಗವನ್ನು ತಿಳಿಯದವರಾಗಿದ್ದಾರೆ.

ದೇವಜನರೇ, ನೀವು ನಡೆಯುವಾಗ, ನಿಮ್ಮ ಕಾಲುಗಳಿಗೆ ದೇವರ ವಾಕ್ಯ ದೀಪವಾಗಿ ಇರುವದಾ? ದೇವರ ಆಶೀರ್ವಾದಗಳಿಗೆ ಪಾತ್ರರಾಗಬೇಕಾದರೆ ದೇವರ ವಾಕ್ಯದ ಬೆಳಕಿನಲ್ಲಿ ನಡೆಯಿರಿ.

*ನೆನಪಿಗೆ : "ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವದೇ ಒಳ್ಳೇದು" (2 ಪೇತ್ರ. 1:19).*



ಏಪ್ರಿಲ್ 3

## ಸತ್ಯವೇದವೇ ಬೆಳಕು!

ಬೆಳಿಗ್ಗೆ : ನ್ಯಾಯ. 19,20,21
ಸಂಜೆ : ಲೂಕ. 7:36–50

"ಆಜ್ಞೆಯೇ ದೀಪ, ಉಪದೇಶವೇ ಬೆಳಕು" (ಜ್ಞಾನೋ. 6:23).

ಮಾರ್ಗ ತಿಳಿಯದೆ ಕುರಿಯಂತೆ ನೀವು ಅಲೆಯುವಾಗ, ಸತ್ಯವೇದ ನಿಮಗೆ ಬೆಳಕನ್ನು ನೀಡಿ, ಕರ್ತನ ಮಾರ್ಗದಲ್ಲಿ ನಡೆಸುವದು. ಕೀರ್ತನೆಗಾರನಾದ ದಾವೀದನು ಹೀಗೆ ಬರೆಯುತ್ತಾನೆ. "ನನ್ನ ಪ್ರಾಣವನ್ನು ಉಜ್ಜೀವಿಸ ಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿ ಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ" ಎಂದು (ಕೀರ್ತನೆ. 23:3).

ಎಲ್ಲೆಲ್ಲೂ ಇರುಳು ಮುಸುಕಿದೆ! ಸಮುದ್ರದ ಅಲೆಗಳು ಬೋರ್ಗರೆಯುತ್ತಾ ಹಡಗಿನ ಮೇಲೆ ಅಪ್ಪಳಿಸುತ್ತಿದೆ! ಹಡಗು ಮುಳುಗಿಹೋಗುವದಾ? ಎಂದು ನಾವಿಕರು ಭಯಭೀತರಾಗಿದ್ದಾರೆ. ಆಗ ಒಂದು ದಿಕ್ಕಿನಿಂದ ದೀಪಗೃಹದಿಂದ (Light House) ಬರುವ ಕೆಂಪು ದೀಪದ ಬೆಳಕನ್ನು ನಾವಿಕರು ನೋಡುವದಾದರೆ, ಅವರು ಎಷ್ಟೊಂದು ಸಂತೋಷ ಪಡುವರು, ಸಮಾಧಾನ ಹೊಂದುವರಲ್ಲವೇ? ಹತ್ತಿರದಲ್ಲೇ ಸಮುದ್ರದಂಡೆ ಇರುವದು. ನೇರವಾಗಿ ಆ ದಿಕ್ಕಿನಲ್ಲಿ ಹಡಗನ್ನು ನಡೆಸಿದರೆ ಬಿರುಗಾಳಿಗೂ ಅಲೆಗಳ ಅಬ್ಬರಕ್ಕೂ ತಪ್ಪಿಸಿಕೊಳ್ಳಬಹುದು ಎಂದು ಹೇಳಿ ದೀಪಗೃಹದ ಬೆಳಕಿನ ಕಡೆಗೆ ಹೋಗುವರಲ್ಲವೇ? ಅನೇಕ ವೇಳೆಗಳಲ್ಲಿ ನಮ್ಮ ಜೀವಿತದಲ್ಲಿ ಬಿರುಗಾಳಿ ಬೀಸುವದು. ಯಾವ ದಿಕ್ಕಿನಲ್ಲಿ ಸಾಗಬೇಕೆಂದು ತಿಳಿಯದವರಾಗಿ ತಬ್ಬಿಬ್ಬಾಗುವೆವು. ಅಂಥಹ ಸಮಯಗಳಲ್ಲಿ ಒಂದು ನಿರ್ದಿಷ್ಟವಾದ ತೀರ್ಮಾನ ತೆಗೆದುಕೊಳ್ಳಬೇಕಾಗುವದು. ದೇವರ ಮಾರ್ಗ ಯಾವುದು? ಆತನ ಚಿತ್ತವೇನು? ಯಾವ ಮಾರ್ಗದಲ್ಲಿ ಸಾಗಿದರೆ ದೇವರ ಆಶೀರ್ವಾದ ನಮಗೆ ದೊರೆಯುವದು ಎಂದೆಲ್ಲಾ ನಮ್ಮ ಮನಸ್ಸು ಪರಿತಪಿಸುವದು. ಆ ಸಮಯದಲ್ಲಿ ದೇವರ ವಾಕ್ಯವೇ ನಮಗೆ ಬೆಳಕನ್ನು ನೀಡುವದು. ಇಂಗ್ಲೆಂಡ್ ದೇಶದಲ್ಲಿ ಒಬ್ಬನು ಅರಸನಾಗಿ ರಾಜ್ಯಾಧಿಕಾರ ವಹಿಸುವಾಗ, ಅರಸನ ಕೈಗಳಲ್ಲಿ ರಾಜದಂಡ, ಕೊಡುವದರ ಜೊತೆಗೆ ಸತ್ಯವೇದದ ಒಂದು ಪ್ರತಿಯನ್ನು ಕೊಡಲಾಗುವದು. ಕಾರಣ, ಸತ್ಯವೇದದಲ್ಲಿ ಕರ್ತನ ಜ್ಞಾನ, ಬೆಳಕು, ಆಜ್ಞೆ ಇರುವದು. ಅದರ ಮೂಲಕ ಅರಸನು ತನ್ನ ದೇಶವನ್ನು ಅದರ ಪ್ರಜೆಗಳನ್ನು ನ್ಯಾಯ ಧರ್ಮಮಾರ್ಗದಲ್ಲಿ ನಡೆಸಬೇಕೆಂಬುದು.

ದೇವಜನರೇ, ದೊಡ್ಡ ದೊಡ್ಡ ಅರಸರಿಗೆ ವಿದ್ಯಾವಂತರಿಗೆ, ಶ್ರೀಮಂತರಿಗೆ ಮಾತ್ರವಲ್ಲ, ಬಡವರಿಗೂ, ಅವಿದ್ಯಾವಂತರಿಗೂ ಪ್ರತಿಯೊಬ್ಬರಿಗೂ ಬೆಳಕನ್ನು ನೀಡಿ ಮಾರ್ಗಸೂಚಿಯಂತೆ ನಡೆಸುವದು. ಸತ್ಯವೇದವನ್ನು ತೆರೆದು ಓದುವಾಗ "ದೇವರೇ ಯಾವ ಮಾರ್ಗದಲ್ಲಿ ಸಾಗಬೇಕೆಂಬುದನ್ನು ನನಗೆ ಹೇಳು" ಎಂದು ಬೇಡಿರಿ. ಕರ್ತನು ನಿಶ್ಚಯವಾಗಿ ತನ್ನ ವಾಕ್ಯವನ್ನು ನಿಮಗೆ ಕೊಟ್ಟು ನಿಮ್ಮನ್ನು ನಡೆಸುತ್ತಾನೆ. "ಯೆಹೋವನ ನಿಯಮಗಳು ನೀತಿಯುಳ್ಳವುಗಳಾಗಿವೆ. ಮನಸ್ಸನ್ನು ಹರ್ಷ ಪಡಿಸುತ್ತವೆ" (ಕೀರ್ತನೆ. 19:8).

*ನೆನಪಿಗೆ : ನಿನ್ನ ವಾಕ್ಯ ವಿವರಣೆಯಿಂದ ಯುಕ್ತಿಹೀನರಿಗೆ ಜ್ಞಾನೋದಯವಾಗುವದು (ಕೀರ್ತ.119:130)*

ಏಪ್ರಿಲ್ 4

## ಮಾರ್ಗ ತೋರಿಸುವದು!

ಬೆಳಿಗ್ಗೆ : ರೂತಳು 1,2,3,4
ಸಂಜೆ : ಲೂಕ. 8:1–25

“ಯೌವನಸ್ಥನು ತನ್ನ ನಡತೆಯನ್ನು ಶುದ್ಧಪಡಿಸಿಕೊಳ್ಳುವದು ಯಾವದರಿಂದ? ನಿನ್ನ ವಾಕ್ಯವನ್ನು ಗಮನಿಸಿ ನಡೆಯುವದರಿಂದಲೇ” (ಕೀರ್ತನೆ 119:9).

ದೇವರ ವಾಕ್ಯವು ಮನುಷ್ಯನ ಬಾಳಿಗೆ ದೀಪವಾಗಿರುವದು. ಮಾರ್ಗಕ್ಕೆ ಬೆಳಕಾಗಿರುವದು ಮಾತ್ರವಲ್ಲ, ಅದು ನಮ್ಮನ್ನು ನಾವೇ ಪರೀಕ್ಷಿಸಿಕೊಳ್ಳುವದಕ್ಕೂ ವಾಕ್ಯದಂತೆ ನಡೆದು ಶುದ್ಧೀಕರಿಸಿಕೊಳ್ಳುವದಕ್ಕೂ ಸಹಾಯಕವಾಗಿರುವದು. ಒಬ್ಬ ಯೌವನಸ್ಥನ ಜೀವಿತವನ್ನು ಶುದ್ಧೀಕರಿಸಿ ಪರಿಶುದ್ಧಪಡಿಸುವದರ ಕಾರಣವೇನು? ಹೌದು, ಅದನ್ನು ಬರೆದಾತನು ಸಾಧಾರಣವಾದವನಲ್ಲ ಆತನು ಪವಿತ್ರಾತ್ಮನೇ ಆಗಿರುವನು.

ಈ ಪ್ರಪಂಚದ ಕಾನೂನು ನಿಯಮಗಳೆಲ್ಲವೂ ಮನುಷ್ಯನಿಂದ ಬರೆಯಲ್ಪಟ್ಟದ್ದಾಗಿರುವವು. ಆದರೆ ಸತ್ಯವೇದವು ಪ್ರಕೃತಿಯನ್ನೂ ಲೋಕವನ್ನೂ ಸೃಷ್ಟಿಸಿದಾತನೂ, ಅಗಮ್ಯನೂ ಆಗಿರುವ ದೇವಾದಿದೇವನಿಂದ ರಚಿಸಲ್ಪಟ್ಟ ಪುಸ್ತಕವಾಗಿದೆ. ಒಂದೊಂದು ವಾಕ್ಯವೂ ದೇವರಾತ್ಮನಿಂದ ಬರೆಯಲ್ಪಟ್ಟದ್ದಾಗಿದೆ. ಆದ್ದರಿಂದಲೇ ಪ್ರಪಂಚದಲ್ಲಿನ ಇತರ ಎಲ್ಲಾ ಪುಸ್ತಕಗಳಿಗಿಂತ ವ್ಯತ್ಯಾಸವುಳ್ಳದ್ದಾಗಿದೆ. ಅದು ಮನುಷ್ಯನನ್ನು ಪರಿಶುದ್ಧ ಮಾರ್ಗದಲ್ಲಿ ನಡೆಸುವದು. ಸತ್ಯವೇದವನ್ನು ಓದುವಾಗ ನಿಮಗೆ ಸಿಗುವ ಆಶೀರ್ವಾದಗಳು ಎಷ್ಟು ಶ್ರೇಷ್ಠವಾದವುಗಳು. ಸತ್ಯವೇದ ವಾಕ್ಯಗಳು ನಿಮ್ಮ ಜೀವಿತವನ್ನು ಶುದ್ಧೀಕರಿಸಿ, ನಿಮ್ಮನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವದು. ಕರ್ತನಾದ ಯೇಸುಕ್ರಿಸ್ತನು “ದೇವರೇ, ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು. ನಿನ್ನ ವಾಕ್ಯವೇ ಸತ್ಯವು” (ಯೋಹಾನ. 17:17) ಎಂದು ಹೇಳಿದನು. ಅಬ್ರಹಾಂ ಲಿಂಕನ್ ಅವಿದ್ಯಾವಂತನು. ಬಾಲಕನಾಗಿದ್ದಾಗಲೇ ಕಾಡಿನಲ್ಲಿ ಕಟ್ಟಿಗೆಗಳನ್ನು ಆರಿಸಿ ತಲೆಯ ಮೇಲೆ ಹೊತ್ತು ತಂದು ಮಾರಿ ಜೀವಿಸುತ್ತಿದ್ದನು. ಉಳಿದ ಸಮಯಗಳಲ್ಲಿ ಸತ್ಯವೇದವನ್ನು ಓದುತ್ತಿದ್ದನು. ಸತ್ಯವೇದ ಆತನನ್ನು ಜ್ಞಾನಿಯನ್ನಾಗಿಸಿತು. ಕೊನೆಯಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ರಾಷ್ಟ್ರಪತಿಯನ್ನಾಗಿ ಕರ್ತನು ಆತನನ್ನು ನಿಲ್ಲಿಸಿ ಆಶೀರ್ವದಿಸಿದನು.

ದೇವಮಕ್ಕಳೇ, ದೇವರ ವಾಕ್ಯಗಳಿಗಾಗಿ ನಿಮ್ಮ ಹೃದಯ ದಾಹಗೊಳ್ಳಲಿ. ಸತ್ಯವೇದವನ್ನು ಓದಿ ಧ್ಯಾನಿಸಿ ನಿಮ್ಮ ಜೀವಿತದಲ್ಲಿ ಅದನ್ನು ಅಳವಡಿಸಿಕೊಳ್ಳಿರಿ. ಆಗ ನೀವು ಶುದ್ಧೀಕರಿಸಲ್ಪಟ್ಟು ಪರಲೋಕ ರಾಜ್ಯವನ್ನು ಪ್ರವೇಶಿಸಲು ಅರ್ಹತೆಯುಳ್ಳವರಾಗುವಿರಿ. ನಿಮ್ಮ ಜೀವಿತ ಕಾಲವೆಲ್ಲಾ ನೀವು ಸತ್ಯವೇದವನ್ನು ಹೊರುವಿರಾದರೆ, ಅಂತ್ಯವೇಳೆಯಲ್ಲಿ ಸತ್ಯವೇದ ನಿಮ್ಮನ್ನು ಹೊತ್ತು, ನಾಶನದಿಂದ ರಕ್ಷಿಸಿ ಪರಮಕಾನಾನಿಗೆ ಸೇರಿಸುವದು.

*ನೆನಪಿಗೆ : “ನಿನಗೆ ವಿರೋಧವಾಗಿ ಪಾಪ ಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ” (ಕೀರ್ತ. 119:11).*



ಏಪ್ರಿಲ್ 5

## ಆತ್ಮದ ಆಹಾರ!

ಬೆಳಿಗ್ಗೆ : 1 ಸಮು 1,2,3
ಸಂಜೆ : ಲೂಕ. 8:26–56

“ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು” (ಮತ್ತಾಯ. 4:4).

ಅನುದಿನದ ಆಹಾರ ವಾಚಕರೆಲ್ಲರಿಗೂ ಕ್ರಿಸ್ತನ ಪುನರುತ್ಥಾನದ ಶುಭಾಷಯಗಳು. ದೇವರ ವಾಕ್ಯವು, ಆತ್ಮೀಕ ಆಹಾರವಾಗಿರುವದು. ಮನುಷ್ಯನು ಪ್ರಪಂಚದಲ್ಲಿ ಜೀವಿಸಲು ಆಹಾರ ಅಗತ್ಯವಾದದ್ದು. ಕೆಲಸ ಮಾಡಲು ಶರೀರಕ್ಕೆ ಬಲಬೇಕು. ಅದಕ್ಕಾಗಿ ಒಳ್ಳೆಯ ಆಹಾರ ಸೇವಿಸಬೇಕು. ಯೇಸು ಕ್ರಿಸ್ತನು ಹೇಳಿದನು, “ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ. ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು” ಎಂದು (ಮತ್ತಾಯ4:4).

ಯೇಸುಕ್ರಿಸ್ತನು ತನ್ನ ಸೇವೆಯನ್ನು ಪ್ರಾರಂಭಿಸುವ ಮೊದಲು ಹಗಲಿರುಳು ನಾಲ್ವತ್ತು ದಿನಗಳು ಅರಣ್ಯದಲ್ಲಿ ಉಪವಾಸ ಪ್ರಾರ್ಥನೆ ಮಾಡಿದನು. ಉಪವಾಸ ಮುಗಿದಾಗ ಆತನಿಗೆ ಹಸಿವೆಯಾಯಿತು. ಆಗ ಸೈತಾನನು ಆತನನ್ನು ಶೋಧನೆಗೆ ಒಳಪಡಿಸುವ ಸಲುವಾಗಿ ಬಂದು, “ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗುವಂತೆ ಹೇಳು” ಅಂದನು. ಹಸಿವಿನಿಂದ ಇರುವವನಿಗೆ ಸೈತಾನನು ಕೊಡುವದೆಲ್ಲಾ ಬರೀ ಕಲ್ಲೇ. ಯಾವ ಒಬ್ಬ ತಂದೆಯೂ ತನ್ನ ಮಗನಿಗೆ ರೊಟ್ಟಿಗೆ ಬದಲಾಗಿ ಕಲ್ಲನ್ನು ಕೊಡುವದಿಲ್ಲ. ಮೀನಿಗೆ ಬದಲಾಗಿ ಹಾವನ್ನು ಕೊಡುವದಿಲ್ಲ. ನಮ್ಮ ಪರಲೋಕದ ತಂದೆ ಜೀವ ರೊಟ್ಟಿಯಾದ ಪರಲೋಕದ ಮನ್ನವನ್ನೇ ಕೊಡುವನು. ಶರೀರಕ್ಕೆ ರೊಟ್ಟಿ ಎಷ್ಟು ಅಗತ್ಯವೋ ಹಾಗೆಯೇ ನಿಮ್ಮ ಆತ್ಮಕ್ಕೆ ಸತ್ಯವೇದ ವಾಕ್ಯ ಅಷ್ಟೇ ಅಗತ್ಯವಾದದ್ದು. ಪ್ರಾಪಂಚಿಕ ಆಹಾರವು ಶರೀರದ ಹಸಿವನ್ನು ನೀಗಿಸುವದು. ಆದರೆ ದೇವರ ವಾಕ್ಯವೋ, ಆತ್ಮದ ಹಸಿವನ್ನು ನೀಗಿಸುವದು. ಅನೇಕರು ತಮ್ಮ ಶಾರೀರಿಕ ಹಸಿವನ್ನು ಆಹಾರದಿಂದ ಪೋಷಿಸಲು ಅರಿತಿರುವರು. ಆದರೆ ದೇವರ ವಾಕ್ಯಗಳನ್ನು ಓದದೇ ತಮ್ಮ ಆತ್ಮವನ್ನು ಉಪವಾಸವಿಡುವರು. ಅವರ ಆತ್ಮ ತೆನಾಲಿರಾಮನು ಕತ್ತಲೆಕೋಣೆಯಲ್ಲಿ ಬೆಳೆಸಿದ ಕುದುರೆಯಂತಿರುವದು. ಕೀರ್ತನೆಗಾರನು ಹೇಳುತ್ತಾನೆ “ನಿನ್ನ ನುಡಿಗಳು ನನ್ನ ನಾಲಿಗೆಗೆ ಎಷ್ಟೋ ರುಚಿಯಾಗಿವೆ. ಅವು ನನ್ನ ಬಾಯಿಗೆ ಜೇನುತುಪ್ಪಕ್ಕಿಂತಲೂ ಸಿಹಿಯಾಗಿವೆ” ಎಂದು (ಕೀರ್ತ. 119:103).

ದೇವಜನರೇ, ನಿಮಗೆ ಆತ್ಮದಲ್ಲಿ ಬಲ ಅಗತ್ಯವಾದದ್ದು ಕರ್ತನ ವಾಕ್ಯಗಳನ್ನು ಬಯಸಿ ಸೇವಿಸಿರಿ. ಸತ್ಯವೇದವನ್ನು ಆಹಾರದಂತೆ ಓದಿ ಧ್ಯಾನಿಸಿರಿ. ನಿಮ್ಮ ಆತ್ಮವನ್ನು ಬಲಪಡಿಸಿಕೊಳ್ಳಿರಿ. ಹೆಚ್ಚಾಗಿ ಸತ್ಯವೇದವನ್ನು ಓದಲು ಇಂದೇ ತೀರ್ಮಾನಿಸಿರಿ.

*ನೆನಪಿಗೆ : “ಆತನ ತುಟಿಗಳಿಂದ ಹೊರಟ ನಿಯಮಗಳಿಗೆ ನಾನು ಹಿಂದೆಗೆಯಲಿಲ್ಲ. ಆತನ ಬಾಯಿಂದ ಬಂದ ಮಾತುಗಳನ್ನು ಎದೆಯಲ್ಲಿ ನಿಧಿಯನ್ನಾಗಿ ಬಚ್ಚಿಟ್ಟುಕೊಂಡಿದ್ದೇನೆ (ಯೋಬ.23:12)*

| ಏಪ್ರಿಲ್ 6 | ಸೇವಿಸಿ ಬಲಹೊಂದು! | ಬೆಳಿಗ್ಗೆ : 1 ಸಮು 4,5,6<br>ಸಂಜೆ : ಲೂಕ. 9:1–17 |
|---|---|---|

“ಆತನು ನನಗೆ ನರಪುತ್ರನೇ, ನಿನಗೆ ಸಿಕ್ಕಿದ ಈ ಸುರುಳಿಯನ್ನು ತಿನ್ನು; ಇದರಲ್ಲಿನ ಸಂಗತಿಗಳನ್ನು ಇಸ್ರಾಯೇಲ್ ವಂಶದವರಿಗೆ ಸಾರು, ನಡೆ ಎಂದು ಅಪ್ಪಣೆ ಕೊಟ್ಟನು” (ಯೆಹೆ.3:1).

ಸತ್ಯವೇದವನ್ನು ನೀವು ಕಣ್ಣುಗಳಿಂದ ಓದಿದರೂ, ಅದು ಆತ್ಮಕ್ಕೆ ಹೋಗುವಾಗ, ಒಳಗಿನ ಮನುಷ್ಯನಿಗೆ ಬಲವಾದ ಆಹಾರವಾಗಿ ಸೇರುವದು. ಕರ್ತನು ಪ್ರವಾದಿಯಾದ ಯೆಹೆಜ್ಕೇಲನ ಬಳಿ ಈ ಸುರುಳಿಯನ್ನು ತಿಂದು ಇದರಲ್ಲಿರುವ ಸಂಗತಿಗಳನ್ನು ಇಸ್ರಾಯೇಲ್ಯರಿಗೆ ಹೇಳು ಅಂದನು. ಅದುವೇ ನಿಮಗೆ ಸತ್ವವನ್ನು ಬಲವನ್ನೂ ಕೊಡುವಂಥದ್ದು.

ಕರ್ತನು ನಿಮಗೆ ಕೊಡುವ ಆಹಾರ ಸಾಧಾರಣವಾದ ಆಹಾರವಲ್ಲ. ಅದು ಪರಲೋಕದ ಮನ್ನದಂತೆ ಇರುವಂಥದ್ದು. ಅದು ಜೇನಿಗಿಂತಲೂ ಸಿಹಿಯಾದದ್ದು. ಇಸ್ರಾಯೇಲ್ಯರು ಅರಣ್ಯದಲ್ಲಿ ನಡೆಸಿಕೊಂಡು ಬಂದಾಗ, ಅವರಿಗೆ ಮನ್ನವನ್ನು ಕೊಟ್ಟನು. ಅದು ದೇವದೂತರ ಆಹಾರವಾಗಿತ್ತು. ಯಾಕೆಂದರೆ ಅವರಿಗೆ ಘೇಂಡಾಮೃಗದಂಥ ಬಲ ಅಗತ್ಯವಾಗಿತ್ತು. ಅವರು ಕಾನಾನನ್ನು ಪ್ರವೇಶಿಸಲು ಅಲ್ಲಿದ್ದ ಏಳು ಜನಾಂಗಗಳನ್ನೂ, ಮೂವತ್ತೊಂದು ರಾಜರನ್ನೂ ಯುದ್ಧದಲ್ಲಿ ಸೋಲಿಸಬೇಕಿತ್ತು. ಸಾಧಾರಣ ಆಹಾರವನ್ನು ಸೇವಿಸಿ ಬಲಹೊಂದಲು ಸಾಧ್ಯವಿಲ್ಲ. ಆದ್ದರಿಂದಲೇ ಕರ್ತನು ದೇವದೂತರ ಆಹಾರವಾದ ಪರಲೋಕದ ಮನ್ನವನ್ನು ಕೊಟ್ಟನು. ನೀವು ನಿತ್ಯರಾಜ್ಯವನ್ನು ಪ್ರವೇಶಿಸಲು ಇಂದು ನಿಮ್ಮ ಮುಂದೆ ಒಂದು ಯುದ್ಧರಂಗ ಇರುವದು. ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೈನ್ಯದೊಂದಿಗೆ ನೀವು ಹೋರಾಡಬೇಕಿದೆ. ದೊರೆತನಗಳೊಂದಿಗೂ ಅಧಿಕಾರಗಳೊಂದಿಗೂ ಈ ಲೋಕದ ಅಂಧಕಾರ ಲೋಕಾಧಿಪತಿಯೊಂದಿಗೂ ಯುದ್ಧ ಮಾಡಬೇಕಾಗಿದೆ. ಮನುಷ್ಯ ಬಲದಿಂದ ಈ ಯುದ್ಧ ಮಾಡಲು ಸಾಧ್ಯವೇ ಇಲ್ಲ. ನಿಮಗೆ ಆತ್ಮೀಕ ಬಲ ಅಗತ್ಯ. ಆದ್ದರಿಂದ ಪರಲೋಕದ ಆಹಾರವಾದ ದೇವರ ವಾಕ್ಯಗಳನ್ನು ನೀವು ಸೇವಿಸಲೇಬೇಕಾಗಿದೆ.

ದೇವಜನರೇ, ಸತ್ಯವೇದ ವಾಕ್ಯಗಳನ್ನು ಪ್ರತಿ ದಿನವೂ ಓದಿರಿ. ಹುಲ್ಲುತಿಂದ ಹಸು ಮೆಲುಕು ಹಾಕುವಂತೆ ಓದಿದ ದೇವರ ವಾಕ್ಯಗಳನ್ನು ಧ್ಯಾನಿಸಿ ಸ್ವಾಸ್ತ್ಯವಾಗಿಸಿಕೊಳ್ಳಿರಿ. ಆಗ ನೀವು ಲೋಕದವರಿಗಿಂತಲೂ ಜ್ಞಾನಿಗಳಾಗಿ ಮಾತ್ರವಲ್ಲ, ಆತ್ಮದಲ್ಲಿ ಬಲಹೊಂದಿದವರಾಗಿಯೂ ಪ್ರಕಾಶಿಸುವಿರಿ. ನಿತ್ಯರಾಜ್ಯದಲ್ಲಿ ಸದಾಕಾಲ ಕರ್ತನೊಂದಿಗೆ ಉಲ್ಲಾಸಿಸುವಿರಿ.

*ನೆನಪಿಗೆ : “ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರ ಮಾಡಿಕೊಂಡೆನು, ನಿನ್ನ ನುಡಿಗಳು ನನಗೆ ಹರ್ಷವೂ, ಹೃದಯಾನಂದವೂ ಆದವು” (ಯೆರೆ. 15:16).*



| ಏಪ್ರಿಲ್ 7 | ಜೀವದ ರೊಟ್ಟಿ! | ಬೆಳಿಗ್ಗೆ : 1 ಸಮು 7,8,9<br>ಸಂಜೆ : ಲೂಕ. 9:18–36 |
|---|---|---|

“ಪರಲೋಕದಿಂದ ಇಳಿದುಬರುವ ಜೀವವುಳ್ಳ ರೊಟ್ಟಿಯು ನಾನೇ; ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು” (ಯೋಹಾನ. 6:51).

ಆದಿಯಲ್ಲಿ ದೇವರು ಮನುಷ್ಯನನ್ನು ಸೃಷ್ಟಿಸಿ, ಏದೇನ್ ತೋಟದಲ್ಲಿ ಇಟ್ಟಾಗ ಅವನ ಆಹಾರಕ್ಕಾಗಿ ಜೀವವೃಕ್ಷದ ಫಲಗಳನ್ನು ಕೊಟ್ಟನು. ಇಸ್ರಾಯೇಲ್ಯರು ಅರಣ್ಯ ಪ್ರಯಾಣದಲ್ಲಿದ್ದಾಗ ದೇವದೂತರ ಆಹಾರವಾದ ಮನ್ನವನ್ನು ಆಕಾಶದಿಂದ ಸುರಿಯಮಾಡಿದ. ಆದರೆ ನಮಗಾದರೋ ಜೀವವುಳ್ಳ ರೊಟ್ಟಿಯನ್ನೇ ಕೊಟ್ಟನು. ಆ ರೊಟ್ಟಿಯೇ ದೇವವಾಕ್ಯಗಳು, ವಾಕ್ಯವಾದ ಕ್ರಿಸ್ತನು.

ಅನುದಿನದ ಆಹಾರವನ್ನು ಈ ದಿನ ನಮಗೆ ಅನುಗ್ರಹಿಸು ಎಂದು ನೀವು ಪ್ರಾರ್ಥಿಸುವಾಗ ಕರ್ತನು ಸತ್ಯವೇದ ವಚನಗಳ ವೃಷ್ಟಿಯನ್ನು ಸುರಿಸುವನು. ಆತ್ಮದಲ್ಲಿ ಬಲವನ್ನೂ ಸತ್ವವನ್ನೂ ದಯಪಾಲಿಸುವನು. ಇದನ್ನು ಸೇವಿಸದೇ ಇರುವದರಿಂದ ಅನೇಕ ವಿಶ್ವಾಸಿಗಳು ಇಂದು ಬಲವಿಲ್ಲದವರಾಗಿ ತಡವರಿಸುವದನ್ನು ಕಾಣುತ್ತೇವೆ. ಚಿಕ್ಕ ಸಮಸ್ಯೆಗಳು ಬಂದರೂ ಸೋತುಹೋಗುವರು. ಬಿದ್ದು ಬಿದ್ದು ಎದ್ದೇಳುವರು, ಕಾರಣ ಅವರು ಪರಲೋಕದಿಂದ ಬಂದ ದೇವರ ವಾಕ್ಯಗಳ ಮಹಿಮೆಯನ್ನು ತಿಳಿಯದವರಾಗಿ ವಿಶ್ವಾಸದ ಮಾತುಗಳನ್ನು ದೃಢವಾಗಿ ಅರಿಕೆ ಮಾಡುವದಿಲ್ಲ. ಕರ್ತನು ತನ್ನ ಮಕ್ಕಳಿಗೆ ಯಾವಾಗಲೂ ಶ್ರೇಷ್ಠವಾದವುಗಳನ್ನೇ ನೀಡುವನು. ಜೀವಿತಕಾಲದಲ್ಲೆಲ್ಲಾ ಆತ್ಮೀಕ ಆಹಾರವಾಗಿ ಸತ್ಯವೇದ ವಾಕ್ಯಗಳು ಇಡಲ್ಪಟ್ಟಿದೆ. ಯೇಸುಕ್ರಿಸ್ತನು ಹೇಳಿರುವನು. ಶಾಸ್ತ್ರಗಳಿಂದ ನಿತ್ಯಜೀವವು ದೊರೆಯುತ್ತದೆಂದು ನೀವು ನೆನಸಿ ಅವುಗಳನ್ನು ವಿಚಾರಿಸುತ್ತೀರಲ್ಲಾ ಅವುಗಳೂ ನನ್ನ ವಿಷಯದಲ್ಲಿ ಸಾಕ್ಷಿಕೊಡುವವುಗಳಾಗಿವೆ, ಆದರೂ ಜೀವ ಹೊಂದುವದಕ್ಕಾಗಿ ನನ್ನ ಬಳಿಗೆ ಬರುವದಕ್ಕೆ ನಿಮಗೆ ಮನಸ್ಸಿಲ್ಲ ಎಂದು (ಯೋಹಾನ. 5:39,40).

ದೇವಮಕ್ಕಳೇ, ಜೀವಕೊಡುವ ರೊಟ್ಟಿ ಕ್ರಿಸ್ತನೇ ಆಗಿದ್ದಾನೆ. ಸೌವಾರ್ತಿಕನಾದ ಯೋಹಾನನು ಸುವಾರ್ತೆಯ ಪ್ರಾರಂಭದಲ್ಲೇ ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು. ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬುವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು (ಯೋಹಾ. 1:1,2) ಎಂದು ಯೇಸುಕ್ರಿಸ್ತನ ಕುರಿತಾಗಿ ಬರೆಯುತ್ತಾನೆ. ಆತನೇ ಭೂಮಿಯಲ್ಲಿ ಅವತರಿಸಿ ಪರಲೋಕ ರಾಜ್ಯದ ಕುರಿತು ಬೋಧನೆ ಮಾಡಿದನು. ಆತನನ್ನು ಅಂಗೀಕರಿಸಿದ ಪ್ರತಿಯೊಬ್ಬರೂ ನಾಶವಾಗದೆ ನಿತ್ಯರಾಜ್ಯಕ್ಕೆ ಬಾಧ್ಯರಾಗುವರೆಂದು ವಾಗ್ದಾನ ಮಾಡಿರುವನು. ಪ್ರಿಯರೇ ಆತನ ಬೋಧನೆಗಳಂತೆ ನಡೆಯಲು ನಿಮ್ಮನ್ನು ಇಂದೇ ಒಪ್ಪಿಸಿಕೊಡಿರಿ. ನಿತ್ಯ ಜೀವದ ಬಾಧ್ಯತೆಯನ್ನು ಹೊಂದಿಕೊಳ್ಳಿರಿ.

*ನೆನಪಿಗೆ : ಎಲೈ, ಬಾಯಾರಿದ ಸಕಲಜನರೇ, ನೀರಿನ ಬಳಿಗೆ ಬನ್ನಿರಿ. ಹಣವಿಲ್ಲದವನು ಸಹ ಬರಲಿ! ಬನ್ನಿರಿ ಕೊಂಡುಕೊಳ್ಳಿರಿ. ಉಣ್ಣಿರಿ! ಬಂದು ದ್ರಾಕ್ಷಾರಸವನ್ನೂ, ಹಾಲನ್ನೂ ಹಣ ಕೊಡದೆ ಕ್ರಯವಿಲ್ಲದೆ ತೆಗೆದುಕೊಳ್ಳಿರಿ (ಯೆಶಾ. 55:1).*

ಏಪ್ರಿಲ್ 8

## ಬಂಡೆಯನ್ನು ಒಡೆಯುವ ಚಮಟಿ!

ಬೆಳಿಗ್ಗೆ : 1 ಸಮು 10,11,12
ಸಂಜೆ : ಲೂಕ. 9:37–62

"ನನ್ನ ವಾಕ್ಯವು ಬೆಂಕಿಗೂ ಬಂಡೆಯನ್ನು ಒಡೆದುಬಿಡುವ ಚಮಟಿಗೆಗೂ ಸಮಾನವಾಗಿ ಇದೆಯಲ್ಲಾ. ಯೆಹೋವನೇ ಇದನ್ನು ನುಡಿದಿದ್ದಾನೆ." (ಯೆರೆ. 23:29).

ಕರ್ತನು ಸತ್ಯವೇದ ವಾಕ್ಯಗಳನ್ನು ಬೆಳಕಿಗೆ ಹೋಲಿಸಿದನು, ಆತ್ಮವನ್ನು ಬಲಪಡಿಸುವ ಆಹಾರಕ್ಕೆ ಹೋಲಿಸಿದನು. ಈಗ ಬಂಡೆಯನ್ನು ಒಡೆದುಬಿಡುವ ಚಮಟಿಗೆ ಹೋಲಿಸುತ್ತಾನೆ. ಅದರಿಂದ ಒಡೆಯಲಾರದಂಥ ಕಠಿಣವಾದ ಹೃದಯ ಯಾವದೂ ಇಲ್ಲ. ಅದು ಒಡೆಯಲಾಗದ ಹೃದಯವನ್ನು ಒಡೆಯುವ ಚಮಟಿ.

ದೇವರ ವಾಕ್ಯ ಎಂಥಹ ಕಠಿಣ ಹೃದಯಿಯನ್ನೂ ಪುಡಿಮಾಡಿ ತಗ್ಗಿಸಿ ಸಮ ನೆಲವನ್ನಾಗಿಸುವದು. ಮನನೊಂದು ಅತ್ತು, ಒಪ್ಪಿಸಿಕೊಡುವಂತೆ ಮಾಡುವದು. ಅಪೊ. ಪೇತ್ರನು ಪ್ರಸಂಗಿಸಿದಾಗ, ಜನರು ತಮ್ಮ ಹೃದಯದಲ್ಲಿ ಚುಚ್ಚಲ್ಪಟ್ಟರು. ದೇವರ ವಾಕ್ಯ ಚಮಟಿಯಂತೆ ಮಾರ್ಪಟ್ಟು ಅವರ ಹೃದಯಗಳು ಒಡೆದದ್ದರಿಂದ ಸ್ವಾಮಿಗಳೇ, ನಾವು ರಕ್ಷಣೆ ಹೊಂದಲು ಏನು ಮಾಡಬೇಕೆಂದು ಕೇಳಿದರು" (ಅ.ಕೃ. 16:30). ಮೂರು ಸಾವಿರ, ಐದು ಸಾವಿರಗಳಷ್ಟು ಜನರು ದೇವರ ಕಡೆಗೆ ತಿರುಗಿದರು. ಕಾರಣ ದೇವವಾಕ್ಯ ಅವರ ಹೃದಯಗಳನ್ನು ಒಡೆಯಿತು. ಬಿಲಿಗ್ರಹಾಂರವರು ಮಾತನಾಡುವಾಗ ಒಂದು ಮಾತನ್ನು ಪದೇ ಪದೇ ಹೇಳುತ್ತಿದ್ದರು. ಅದೇನೆಂದರೆ "ಸತ್ಯವೇದ ಹೇಳುತ್ತದೆ" (The Bible Says) ಎಂದು. ದೇವರ ವಾಕ್ಯವನ್ನು ಮುಂದಿಟ್ಟು, ಅಧಿಕಾರಯುಕ್ತವಾಗಿ ಪ್ರಸಂಗಿಸುತ್ತಿದ್ದರು. ದೇವರ ವಾಕ್ಯ ಅವರ ಬಾಯಿಂದ ಅಗ್ನಿಯಂತೆ ಹೊರಟು, ಕಲ್ಲಾದ ಅಂತರ್ಯಗಳನ್ನು ಒಡೆದು ಪುಡಿ ಮಾಡುತ್ತಿತ್ತು. "ದೇವರ ವಾಕ್ಯ ಫಲಕೊಡದೆ ಎಂದಿಗೂ ಹಿಂದಿರುಗುವದಿಲ್ಲ" (ಯೆಶಾ. 55:11). ಒಂದು ಮನೆಯಲ್ಲಿ ಕ್ರಿಸ್ತನು ಬಾಗಿಲನ್ನು ತಟ್ಟುತ್ತಿರುವ ದೃಶ್ಯವಿದ್ದ ಚಿತ್ರಪಟವನ್ನು ತೂಗುಹಾಕಿದ್ದರು. ಒಂದು ದಿನ ಆ ಮನೆಯ ಪುಟ್ಟ ಬಾಲಕನು ತನ್ನ ತಂದೆಗೆ ಆ ಚಿತ್ರಪಟವನ್ನು ತೋರಿಸುತ್ತಾ ಇಷ್ಟು ದಿನವಾದರೂ ಮನೆಯ ಬಾಗಿಲನ್ನು ತೆರೆಯದ ಮನುಷ್ಯ ಯಾರು? ಎಂದು ಕೇಳಿದನಂತೆ. ಮಗನ ಈ ಪ್ರಶ್ನೆ ಆ ತಂದೆಯ ಅಂತರ್ಯವನ್ನು ಚಮಟಿಯಿಂದ ಹೊಡೆದಂತಾಯಿತು. ಅವನು ಇಷ್ಟು ಕಾಲವಾದರೂ ಕರ್ತನಿಗೆ ತನ್ನ ಹೃದಯ ಬಾಗಿಲನ್ನು ತೆರೆದಿರಲಿಲ್ಲ. ತಾನೂ ಇನ್ನೂ ರಕ್ಷಿಸಲ್ಪಟ್ಟಿಲ್ಲವೇ ಎಂಬ ಅರಿವು ಅವನಿಗಾಯಿತು. ಅಂದೇ ಕಣ್ಣೀರಿನೊಂದಿಗೆ ತನ್ನನ್ನು ಕರ್ತನಿಗೆ ಒಪ್ಪಿಕೊಟ್ಟು ರಕ್ಷಣೆ ಹೊಂದಿದನು. ದೇವಜನರೇ, ಇಂದು ನಿಮ್ಮನ್ನು ನೀವು ಪರೀಕ್ಷಿಸಿಕೊಳ್ಳಿರಿ. ನಿಮ್ಮ ಹೃದಯ ಕರ್ತನ ಸ್ವರಕ್ಕೆ ತೆರೆದಿದೆಯೋ?

*ನೆನಪಿಗೆ : ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ; ಅದು ನಿನ್ನ ಬಾಯಲ್ಲಿಯೂ, ನಿನ್ನ ಹೃದಯದಲ್ಲಿಯೂ ಇದೆ ಅನ್ನುತ್ತದೆ. ಆ ವಾಕ್ಯವು ನಾವು ಸಾರುವ ನಂಬಿಕೆಯ ವಿಷಯವಾದ ವಾಕ್ಯವೇ (ರೋಮಾ. 10:8).*



ಏಪ್ರಿಲ್ 9

## ಅಗ್ನಿಯಂಥದ್ದು!

ಬೆಳಿಗ್ಗೆ : 1 ಸಮು 13,14
ಸಂಜೆ : ಲೂಕ. 10:1–24

"ನನ್ನ ಮಾತುಗಳನ್ನು ಬೆಂಕಿಯನ್ನಾಗಿಯೂ, ಈ ಜನರನ್ನು ಸೌದೆಯನ್ನಾಗಿಯೂ ಮಾಡುವೆನು" (ಯೆರೆ. 5:14).

ದೇವರ ವಾಕ್ಯವು ಅಗ್ನಿಗೆ ಹೋಲಿಸಲ್ಪಟ್ಟಿರುವದು. ಯೆರೆಮೀಯ 23:29ರಲ್ಲಿ "ನನ್ನ ವಾಕ್ಯವು ಅಗ್ನಿಯಂತಿರುವದು" ಎಂದು ಕರ್ತನು ಹೇಳುತ್ತಾನೆ. ಬೆಂಕಿಗೆ ಒಂದು ಗುಣ ಇರುವುದು, ಅದು ಸುಟ್ಟುಬಿಡುವ ಗುಣ. ಅದು ಮುಟ್ಟಿದ ಎಲ್ಲವನ್ನೂ ಸುಟ್ಟು ಬೂದಿಮಾಡುವದು. ಅಂದು ಅಪೊ. ಪೇತ್ರನು ವಾಕ್ಯವನ್ನು ಪ್ರಸಂಗಿಸಿದಾಗ, ಆ ವಾಕ್ಯ ಕೇಳಿದವರ ಅಂತರ್ಯದಲ್ಲಿ ಪವಿತ್ರಾತ್ಮನನ್ನು ಹತ್ತಿ ಉರಿಸಿತು. ಅವರನ್ನು ದೇವರ ಕಡೆಗೆ ತಿರುಗಿಸಿತು.

ಅಪೊಸ್ತಲರ ಕೃತ್ಯ 10ನೇ ಅಧ್ಯಾಯವನ್ನು ಓದಿನೋಡಿರಿ. ಪೇತ್ರನು ದೇವವಾಕ್ಯವನ್ನು ಇನ್ನೂ ಹೇಳುತ್ತಿರುವಾಗಲೇ ಅವನ ಮಾತುಗಳನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮನ ವರವು ಇಳಿಯಿತು. ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯ ವಿಶ್ವಾಸಿಗಳು ಕೇಳಿದಾಗ ಅನ್ಯಜನಗಳಿಗೂ ಪವಿತ್ರಾತ್ಮ ದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು (ಅ.ಕೃ. 10:44–46). ದೇವರ ವಾಕ್ಯ ಓದುವಾಗ ಜನರ ಮೇಲೆ ಅಗ್ನಿ ಇಳಿದುಬರುವದು. ಅದೇ ವೇಳೆಯಲ್ಲಿ ನೀವು ಸತ್ಯವೇದ ವಾಕ್ಯಗಳನ್ನು ಓದಿ ಧ್ಯಾನಿಸುವಾಗ ನಿಮ್ಮೊಳಗೆ ಅಗ್ನಿ ಇಳಿದುಬರುವದು. ಕಲ್ವಾರಿ ಪ್ರೀತಿ ಅಗ್ನಿಯಾಗಿ ಹತ್ತಿ ಉರಿಯುವದು. ಕರ್ತನಿಗೆ ವಿರೋಧವಾದ ಎಲ್ಲಾ ಗುಣಗಳೂ, ಆಲೋಚನೆಗಳೂ ಸುಟ್ಟು ಬೂದಿಯಾಗುವದು. ಅಗ್ನಿಯ ಇನ್ನೊಂದು ಗುಣ, ಅದು ಭೂಮಿಯಿಂದ ಆಕಾಶದ ಕಡೆಗೆ ಮೇಲ್ಮುಖವಾಗಿ ಎದ್ದೇಳುವದು. ಬೇರೆ ಎಲ್ಲಾ ವಸ್ತುಗಳೂ ಮೇಲೆ ಎಸೆದಾಗ ಕೆಳಕ್ಕೆ ಬೀಳುವವು. ಕಾರಣ ಅವುಗಳು ಭೂಮಿಯ ಗುರುತ್ವಾಕರ್ಷಣೆಗೆ ಒಳಪಟ್ಟಿರುವವು. ನಾವು ಸತ್ಯವೇದ ವಾಕ್ಯಗಳನ್ನು ಓದುವಾಗ ನಮ್ಮೊಳಗೆ ಹತ್ತಿ ಉರಿಯುವ ಪವಿತ್ರಾತ್ಮನೆಂಬ ಅಗ್ನಿ ಕರ್ತನ ಕಡೆಗೆ ನಿಮ್ಮನ್ನು ಕೊಂಡೊಯ್ಯುವದು. ನೀವು ಎಷ್ಟರ ಮಟ್ಟಿಗೆ ದೇವರ ವಾಕ್ಯಗಳನ್ನು ಧ್ಯಾನಿಸುವಿರೋ, ಅಷ್ಟರ ಮಟ್ಟಿಗೆ ದೈವೀಕ ಪ್ರೀತಿ ನಿಮ್ಮೊಳಗೆ ಹತ್ತಿ ಉರಿಯುವದು. ಅಷ್ಟರ ಮಟ್ಟಿಗೆ ದೇವರಿಗೆ ಹತ್ತಿರವಾಗುವಿರಿ. ಆತನಲ್ಲಿ ದೃಢಗೊಳ್ಳುವಿರಿ.

ದೇವಜನರೇ, ಈ ದೈವೀಕ ಪ್ರೀತಿ ಎಂಬ ಅಗ್ನಿ ನಿಮ್ಮೊಳಗೆ ಹತ್ತಿಕೊಂಡು ಉರಿಯುತ್ತಲೇ ಇರಲಿ. ಸತ್ಯವೇದವನ್ನು ಓದಿ, ಧ್ಯಾನಿಸಿ ನಿಮ್ಮ ಆತ್ಮೀಕ ಜೀವಿತವನ್ನು ಚೈತನ್ಯಗೊಳಿಸಿರಿ.

*ನೆನಪಿಗೆ : "ಒಣಗಿಡಕ್ಕೆ ಹತ್ತುವ ಕಿಚ್ಚಿನ ಪ್ರಕಾರವೂ ನೀರನ್ನು ಕುದಿಸುವ ಉರಿಯೋಪಾದಿಯಲ್ಲಿಯೂ ನಮ್ಮ ನಿರೀಕ್ಷೆಗೆ ಮೀರಿದ ಭಯಂಕರ ಕೃತ್ಯಗಳನ್ನು ನಡಿಸು" (ಯೆಶಾಯ 64:2).*

ಏಪ್ರಿಲ್ 10

# ವಾಕ್ಯ!

ಬೆಳಿಗ್ಗೆ : 1 ಸಮು 15,16
ಸಂಜೆ : ಲೂಕ. 10:25–42

"ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು, ಆ ವಾಕ್ಯವು ದೇವರಾಗಿತ್ತು" (ಯೋಹಾನ. 1:1).

ನಮ್ಮ ಕರ್ತನಿಗೆ ವಾಕ್ಯ ಎಂಬ ಹೆಸರುಂಟು (ಯೋಹಾ. 1:1). ದೇವರನ್ನು ವಾಕ್ಯವನ್ನು ಬೇರೆ ಬೇರೆಯಾಗಿ ವಿಭಾಗಿಸಲು ಸಾಧ್ಯವಿಲ್ಲ. ಆತನೇ ವಾಕ್ಯವಾದಾತನು. ವಾಕ್ಯವೇ ದೇವರಾಗಿರುವನು. ಕರ್ತನು ವಾಕ್ಯದೊಂದಿಗೆ ಐಕ್ಯಗೊಂಡಿರುವನು. ನಮ್ಮ ದೇವರು ಪ್ರಪಂಚವನ್ನು ಸೃಷ್ಟಿಸಿದಾಗ ಅದನ್ನು ವಾಕ್ಯದಿಂದಲೇ ಸೃಷ್ಟಿಸಿದನು. 'ಉಂಟಾಗಲಿ' ಎಂಬ ವಾಕ್ಯವನ್ನು ಕಳುಹಿಸಿದನು. ಅದು ಸಕಲವನ್ನೂ ಸೃಷ್ಟಿಸಿತು ಎಂಬ ಸಂಗತಿಯ ಕುರಿತು ಆದಿಕಾಂಡ ಒಂದನೇ ಅಧ್ಯಾಯದಲ್ಲಿ ನೋಡುತ್ತೇವೆ.

ಯೋಹಾನ 1:14ನ್ನು ಓದಿನೋಡಿರಿ. ಆ ವಾಕ್ಯವೆಂಬುವನು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು ಎಂದು ಸೂಚಿಸಿರುವದು. ಆದಿಯಲ್ಲಿ ಇದು ದೇವರ ಬಳಿಯಲ್ಲಿ ಇದ್ದ ವಾಕ್ಯ. ದೇವರಾಗಿದ್ದ ವಾಕ್ಯ, ಯೇಸು ಎಂಬ ಹೆಸರಿನಲ್ಲಿ ಎರಡು ಸಾವಿರ ವರ್ಷಗಳ ಹಿಂದೆ ನಮ್ಮಂತೆ ದೇಹದಾರಿಯಾಗಿ ಈ ಲೋಕಕ್ಕೆ ಬಂದನು. ಯಾಕೆ ಆ ವಾಕ್ಯ ನರಾವತಾರ ಎತ್ತಿತು? ಹೌದು, ನಮ್ಮೊಳಗೆ ವಾಸಮಾಡಲೆಂದೇ ಆತನು ನರನಾಗಿ ಅವತರಿಸಿದನು. ಕೃಪೆಯಿಂದಲೂ, ಸತ್ಯದಿಂದಲೂ ಕೂಡಿದವನಾಗಿ ನಮ್ಮೊಂದಿಗೆ ವಾಸಮಾಡಿದನು. ಆತನು ನಮ್ಮೊಳಗೆ ಬಂದನು ಎಂಬುದರಲ್ಲಿ ಮೂರು ಭಾಗಗಳಿರುವವು. 1. ಪರಲೋಕದಲ್ಲಿದ್ದ ವಾಕ್ಯವಾದಾತನು 2. ದೇಹದಾರಿಯಾದ ವಾಕ್ಯವಾದಾತನು 3. ನಮ್ಮೊಳಗೆ ವಾಸ ಮಾಡುವ ವಾಕ್ಯವಾದಾತನು. ನಮ್ಮೊಳಗೆ ವಾಸಮಾಡುವನು ಎಂಬುದನ್ನು ನಮಗೆ ತಿಳಿಯಪಡಿಸುವಂತೆ ಅಂದು ಯೇಸುಕ್ರಿಸ್ತನು "ರೊಟ್ಟಿಯನ್ನು ತೆಗೆದುಕೊಂಡು ಮುರಿದು ತೆಗೆದುಕೊಳ್ಳಿರಿ. ಇದು ನಿಮಗಾಗಿ ಮುರಿಯಲ್ಪಟ್ಟ ನನ್ನ ದೇಹವಾಗಿದೆ" ಅಂದನು. ಹಾಗೆಯೇ ದ್ರಾಕ್ಷಾರಸವನ್ನು ತೆಗೆದುಕೊಂಡು "ಇದನ್ನು ಕುಡಿಯಿರಿ ಇದು ನಿಮಗಾಗಿ ಸುರಿಸಲ್ಪಡುವ ನನ್ನ ರಕ್ತ. ಇದು ಹೊಸ ಒಡಂಬಡಿಕೆಯ ರಕ್ತವಾಗಿರುವದು" ಅಂದನು (1 ಕೊರಿ. 11:23–25). ನೀವು ರೊಟ್ಟಿಯನ್ನು ದ್ರಾಕ್ಷಾರಸವನ್ನು ಸ್ವೀಕರಿಸುವಾಗೆಲ್ಲಾ ವಾಕ್ಯವಾದಾತನು ನಿಮ್ಮೊಳಗೆ ಬರುವನು.

ದೇವಜನರೇ, ರಾತ್ರಿ ಭೋಜನ ಸಂಸ್ಕಾರದಲ್ಲಿ ಪಾಲುಗೊಳ್ಳುವಾಗ ಮಾತ್ರವಲ್ಲ, ನೀವು ದೇವರ ವಾಕ್ಯಗಳನ್ನು ಓದಿ ಧ್ಯಾನಿಸುವಾಗೆಲ್ಲಾ ವಾಕ್ಯವಾದಾತನು ನಿಮ್ಮ ಮನಸ್ಸಿನಲ್ಲಿ ಚಿಂತನೆಗಳಲ್ಲಿ ಬರುವನು. ಆತನು ನಿಮ್ಮೊಳಗೆ ವಾಸಮಾಡುವದು ಎಷ್ಟು ಭಾಗ್ಯಕರವಾದ ಸಂಗತಿ. ಪ್ರತಿದಿನವೂ ದೇವರ ವಾಕ್ಯಗಳನ್ನು ಕಾತರದಿಂದ ಓದಿ ಧ್ಯಾನಿಸಿರಿ.

*ನೆನಪಿಗೆ : ಜೀವ ವಾಕ್ಯವು ಆದಿಯಿಂದ ಇದ್ದದ್ದು. ನಾವು ಅದನ್ನು ಕಿವಿಯಾರೆ ಕೇಳಿ ಕಣ್ಣಾರೆ ಕಂಡು ಮನಸ್ಸಿಟ್ಟು ನೋಡಿ, ಕೈಯಿಂದ ಮುಟ್ಟಿದ್ದೇವೆ (1 ಯೋಹಾನ. 1:1).*



ಏಪ್ರಿಲ್ 11

# ವಾಕ್ಯವೆಂಬ ಬೀಜ!

ಬೆಳಿಗ್ಗೆ : 1 ಸಮು 17,18
ಸಂಜೆ : ಲೂಕ. 11:1–28

"ಬಿತ್ತುವವನು ಆ ವಾಕ್ಯವೆಂಬ ಬೀಜವನ್ನು ಬಿತ್ತುತ್ತಾನೆ" (ಮಾರ್ಕ. 4:14).

ಸತ್ಯವೇದ ವಾಕ್ಯವು ಬೀಜಕ್ಕೆ ಹೋಲಿಸಲಾಗಿದೆ. ಒಂದು ಬೀಜದ ಶ್ರೇಷ್ಠತೆ ಏನಾಗಿದೆ? ಅದು ಎಷ್ಟು ಚಿಕ್ಕ ಬೀಜವಾಗಿದ್ದರೂ ಅದರ ಮಹತ್ವ ಅದರಲ್ಲಿರುವ ಜೀವದಲ್ಲಿ ಇರುವದು. ಆ ಜೀವ ಆ ಬೀಜದಿಂದ ಒಂದು ಸಸಿಯಾಗಿ ಮೊಳೆಯುವಂತೆ ಮಾಡುವದು. ಅದು ಬೆಳೆದು ಹೇರಳವಾದ ಬೀಜಗಳನ್ನು ಹುಟ್ಟಿಸುವ ಶಕ್ತಿಯನ್ನು ಗಿಡಕ್ಕೆ ಕೊಡುವದು.

ಒಂದು ಚಿಕ್ಕ ಸಾಸಿವೆ ಬೀಜವನ್ನು ತೆಗೆದುಕೊಳ್ಳಿರಿ. ಅದರೊಳಗೆ ಸಾಸಿವೆಯ ಬೇರು, ಅದರ ಎಲೆ, ಹೂವು, ಕಾಯಿಗಳೆಲ್ಲಾ ಅಡಗಿಸಲ್ಪಟ್ಟಿರುವದು. ಆ ಸಾಸಿವೆಯ ಎಲ್ಲಾ ಗುಣಗಳೂ ಆ ಚಿಕ್ಕ ಬೀಜದಲ್ಲಿರುವದು. ಅದರಂತೆಯೇ ದೇವರ ವಾಕ್ಯದಲ್ಲೂ ಜೀವವಿರುವದು. ಆ ಜೀವ ಕ್ರಿಸ್ತನೇ. ಆತನೇ ಮಾರ್ಗವೂ, ಸತ್ಯವೂ, ಜೀವವೂ ಆಗಿರುವನು (ಯೋಹಾನ. 14:6). ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ, ಜೀವವಾಗಿಯೂ ಇವೆ (ಯೋಹಾ. 6:63) ಎಂದು ಕರ್ತನು ಹೇಳುತ್ತಾನೆ. ವಾಕ್ಯವೆಂಬ ಬೀಜ ಪ್ರಸಂಗದ ಮೂಲಕವೋ, ಕೈಪ್ರತಿಗಳ ಮೂಲಕವಾಗಿಯೇ ಇಲ್ಲವೇ ಪುಸ್ತಕಗಳ ಮೂಲಕವಾಗಿಯೋ ಬಿತ್ತುವಾಗ, ಆ ಬೀಜಗಳು ಒಳ್ಳೆಯ ನೆಲದಲ್ಲಿ ಬೀಳುವದು. ವಾಕ್ಯದಲ್ಲಿರುವ ಜೀವ ತಟ್ಟಿ ಎಬ್ಬಿಸುವದು. ಆ ಜೀವದಿಂದ ಆತ್ಮೀಕ ಸಸಿ ಮೊಳಕೆ ಒಡೆಯುವದು. ಮರವಾಗಿ ಬೆಳೆಯುವದು. ಮೂವತ್ತು, ಅರವತ್ತು, ನೂರರಷ್ಟು ಫಲ ನೀಡುವದು. ಒಂದು ಮಾವಿನ ಬೀಜದಲ್ಲಿರುವ ಜೀವ ತಟ್ಟಿ ಎಬ್ಬಿಸಲ್ಪಡುವಾಗ ಅದು ಮಾವಿನ ಮರವಾಗಿ ಬೆಳೆಯುವದು. ತೆಂಗಿನ ಬೀಜದಲ್ಲಿನ ಜೀವ ತೆಂಗಿನ ಮರವಾಗಿ ಬೆಳೆಯುವದು. ತೆಂಗಿನ ಬೀಜದಿಂದ ಮಾವಿನ ಮರ ಬೆಳೆಯುವದಿಲ್ಲ. ನಿಮ್ಮೊಳಗೆ ಕ್ರಿಸ್ತನ ವಾಕ್ಯವೆಂಬ ಬೀಜ ಬಿತ್ತಿರುವದಾದರೆ ನಿಶ್ಚಯವಾಗಿಯೇ ಅದು ನಿಮ್ಮನ್ನು ಕ್ರಿಸ್ತನ ಸಾರೂಪ್ಯದಲ್ಲಿ ಬೆಳೆಯುವಂತೆ ಮಾಡುವದು. ಆದ್ದರಿಂದಲೇ ಸತ್ಯವೇದವನ್ನು ಪುನಃ ಪುನಃ ಓದಿ ಧ್ಯಾನಿಸಿ. ಅದನ್ನು ಅಂಗೀಕರಿಸಿಕೊಳ್ಳಿರಿ. ಸೇವೆಯ ಮುಖ್ಯ ಉದ್ದೇಶವೇ ನಿಮ್ಮನ್ನು ಕ್ರಿಸ್ತನಲ್ಲಿ ಪೂರ್ಣಪಡಿಸಬೇಕೆಂಬುದೇ.

ದೇವಜನರೇ, ದೇವರ ವಾಕ್ಯವನ್ನು ಅಸಡ್ಡೆ ಮಾಡಬೇಡಿರಿ. ಅದು ನಿಮಗೆ ಜೀವವೂ, ಸತ್ಯವೂ, ಮಾರ್ಗವೂ ಆಗಿರುವದು. ಉಜ್ಜೀವಿಸುವ ದೇವರ ವಾಕ್ಯವನ್ನು ಇಂದೇ ಅಂಗೀಕರಿಸಿಕೊಳ್ಳೋಣವೇ?

*ನೆನಪಿಗೆ : "ಭೂಮ್ಯಾಕಾಶಗಳು ಅಳಿದುಹೋಗುವವು. ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ" (ಮತ್ತಾ. 24:35).*

ಏಪ್ರಿಲ್ 12

## ಬಿತ್ತುವವನ ಬೀಜ!

ಬೆಳಿಗ್ಗೆ : 1 ಸಮು 19,20,21
ಸಂಜೆ : ಲೂಕ. 11:29–54

"ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು, ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವನು" (ಕೀರ್ತ. 126:6).

ಕರ್ತನ ವಾಕ್ಯವನ್ನು ಪ್ರಸಂಗಿಸುವವನನ್ನು ಬಿತ್ತುವವನಿಗೆ ಹೋಲಿಸಲಾಗಿದೆ. ಬಿತ್ತುವವನು ತನ್ನ ಕೈಗಳಲ್ಲಿ ಅಧಿಕವಾದ ಬೀಜಗಳನ್ನು ತೆಗೆದುಕೊಂಡು ಬಿತ್ತಲು ಹೊರಡುವನು. ಅದು ಹಲವಾರು ನೆಲಗಳಲ್ಲಿ ಬೀಳುವದು. ಕೆಲವು ಬೀಜಗಳು ದಾರಿಯ ಮಗ್ಗುಲಲ್ಲಿ ಬೀಳುವದು. ಕೆಲವು ಬೀಜಗಳು ಮುಳ್ಳುಗಳಿರುವ ಸ್ಥಳದಲ್ಲಿ ಬೀಳುವದು. ಕೆಲವು ಬೀಜಗಳು ಒಳ್ಳೆಯ ನೆಲದಲ್ಲಿ ಬೀಳುವದು.

ದೇವಸೇವಕರು, ವಾಕ್ಯವೆಂಬ ಬೀಜವನ್ನು ಬಿತ್ತುವಾಗ, ಅವರ ಪ್ರಯತ್ನಕ್ಕೆ ಕರ್ತನು ಒಳ್ಳೆಯ ಫಲ ನೀಡುವನು. ಕೆಲವು ಬೀಜಗಳು ಮೂವತ್ತು, ಅರವತ್ತು, ನೂರರಷ್ಟು ಫಲವನ್ನು ಕೊಡುವದು. ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು (ಕೀರ್ತ. 126:5). ನೀವು ವಾಕ್ಯದ ಬೀಜವನ್ನು ಬಿತ್ತುವಾಗ ಬಹಳ ಆಸಕ್ತಿಯಿಂದ ಕಣ್ಣೀರಿನೊಂದಿಗೆ ಉಪವಾಸದಿಂದ ಬಿತ್ತುವಿರಾದರೆ, ನಿಶ್ಚಯವಾಗಿ ಉತ್ತಮವಾದ ಆತ್ಮಗಳ ಆದಾಯವನ್ನು ಕಾಣುವಿರಿ. ನೀವು ಬಿತ್ತಬೇಕಾದ ಬೀಜ ದೇವರ ವಾಕ್ಯವೇ. ಅದು ದೇವರು ದಯಪಾಲಿಸಿದ ಪರಿಶುದ್ಧವಾದ ಸತ್ಯಗಳು. ಮನುಷ್ಯನಿಗೆ ನಿತ್ಯಜೀವವನ್ನು ನೀಡುವ ಮಹಿಮೆಯಾದ ಬೀಜಗಳು. ದೇವರ ವಾಕ್ಯ ಪರಿಶುದ್ಧವಾದದ್ದು. ಮನುಷ್ಯ ಜ್ಞಾನಕ್ಕೆ ಮೀರಿದ್ದು. ಅದರಲ್ಲಿ ಜೀವವಿರುವದು. ಆದ್ದರಿಂದ ಒಳ್ಳೆ ನೆಲದಲ್ಲಿ ಬಿತ್ತುವಾಗ, ಅವು ಮೊಳೆತು ಬೆಳೆಯಲಾರಂಭಿಸುವದು. ಅವುಗಳದೇ ಆದ ರೀತಿ ನೀತಿಗಳಿರುವದು. ನೀವು ಹೇಗೆ ಬಿತ್ತಿದ್ದರೂ, ನೀರು ಹೊಯ್ದರೂ ಬೆಳೆಸುವವನು ಕರ್ತನು ಈ ಬೀಜಗಳು ಜೀವವಾಗಿರುವದು ಮಾತ್ರವಲ್ಲ, ನಾಶವಾಗದವುಗಳು. ಯೆಹೋವನೇ ನಿನ್ನ ವಾಕ್ಯವು ಪರಲೋಕದಲ್ಲಿ ಶಾಶ್ವತವಾಗಿ ಸ್ಥಾಪಿಸಲ್ಪಟ್ಟಿದೆ" (ಕೀರ್ತ. 119:89) ಎಂದು ಕೀರ್ತನೆಗಾರನು ಹೇಳುತ್ತಾನೆ.

ದೇವಜನರೇ, ಕರ್ತನ ವಾಕ್ಯಗಳು ಜೀವವುಳ್ಳದ್ದು, ನಾಶವಾಗದ್ದು ಮಾತ್ರವಲ್ಲ. ಅದು ಅಮೂಲ್ಯವಾದದ್ದು, ಕ್ರಯ ಕಟ್ಟಲಾಗದಂಥದ್ದು. ನಾಶವಾಗದ ಆ ಬೀಜವು ಒಳ್ಳೆಯ ಹೃದಯದಲ್ಲಿ ಬಿತ್ತಲ್ಪಟ್ಟಾಗ, ಅದು ನಾಶವಾಗದ ನಿತ್ಯಜೀವವನ್ನು ಕೊಡುವದು. ದೇವರ ವಾಕ್ಯವೆಂಬ ಬೀಜ ಬಿತ್ತಲು ನಿಮ್ಮ ಹೃದಯ ಹಸನಾದ ನೆಲವಾಗಿರಲಿ. ಮೂವತ್ತು, ಅರವತ್ತು, ನೂರರಷ್ಟು ಫಲ ನೀಡುವಂತಾಗಲಿ.

*ನೆನಪಿಗೆ : "ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ. ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಗೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ" (ಯೆಹೋ. 1:8).*



ಏಪ್ರಿಲ್ 13

## ಆತ್ಮವಾಗಿಯೂ, ಜೀವವಾಗಿಯೂ!

ಬೆಳಿಗ್ಗೆ : 1 ಸಮು 22,23,24
ಸಂಜೆ : ಲೂಕ. 12:1–34

"ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ, ಜೀವವಾಗಿಯೂ ಅವೆ" (ಯೋಹಾನ 6:63).

ದೇವರ ಒಂದೊಂದು ವಾಕ್ಯದಲ್ಲೂ ಜೀವವಿರುವದು, ಆತ್ಮವಿರುವದು. ಆದ್ದರಿಂದ ಈ ಪ್ರಪಂಚದ ಯಾವದೇ ಪುಸ್ತಕಗಳಿಗಾಗಲಿ, ತತ್ವಜ್ಞಾನಕ್ಕಾಗಲಿ ಸತ್ಯವೇದವನ್ನು ಹೋಲಿಸಲಾಗದು. ದೇವರ ವಾಕ್ಯ ಕೋಟಿಕೋಟಿ ಪಾಲು ಶ್ರೇಷ್ಠವಾದದ್ದು! ಮಹತ್ವವುಳ್ಳದ್ದು!

ಈ ದೇವರ ವಾಕ್ಯಗಳು ಯಾರ್ಯಾರ ಆಂತರ್ಯದಲ್ಲಿ ಬಿತ್ತಲ್ಪಟ್ಟಿದೆಯೋ, ಅವರು ತುತೂರಿ ಶಬ್ದ ಕೇಳುವಾಗ, ಬೀಜ ಮೊಳೆತು ಮೇಲೆ ಏಳುವ ಪ್ರಕಾರ, ನೂತನ ಜೀವವನ್ನು ಪಡೆದು, ರೂಪಾಂತರ ಹೊಂದಿ ಶರೀರದೊಂದಿಗೆ ಏಳುವರು. ಆದ್ದರಿಂದಲೇ ಕ್ರಿಸ್ತನಲ್ಲಿ ಸತ್ತವರನ್ನು ನಾವು ಹೂಳುವದಿಲ್ಲ. ಸುಡುವದೂ ಇಲ್ಲ. ಅವರನ್ನು ಬಿತ್ತುತ್ತೇವೆ. ರೈತನು ತಾನು ಬಿತ್ತುವ ಬೀಜಗಳು ಒಂದು ದಿನ ಮೊಳೆತು ಏಳುವದು ಎಂಬ ನಂಬಿಕೆಯೊಂದಿಗೆ ಬಿತ್ತಲು ಹೋಗುವನು. ಅದರಂತೆಯೇ, ತುತೂರಿ ಶಬ್ದ ಕೇಳಿಸುವಾಗ ದೇವಮಕ್ಕಳು ಜೀವದಿಂದ ಎದ್ದೇಳುವರು ಎಂಬದು ಕ್ರೈಸ್ತ ನಂಬಿಕೆ. ಅಪೊ. ಪೌಲನು ಹೇಳುತ್ತಾನೆ "ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ. ನಿರ್ಲಯಾವಸ್ಥೆಯಲ್ಲಿ ಎದ್ದು ಬರುವದು. ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದು ಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ. ಬಲಾವಸ್ಥೆಯಲ್ಲಿ ಎದ್ದು ಬರುವದು. ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ. ಆತ್ಮೀಕ ದೇಹವಾಗಿ ಎದ್ದು ಬರುವದು" ಎಂದು (1 ಕೊರಿಂಥ 15:42–44). ಭಕ್ತನಾದ ಯೋಬನಿಗೆ ತನ್ನ ರಕ್ಷಕನನ್ನು, ತಾನು ಕಣ್ಣಾರೆ ಒಂದು ದಿನ ನೋಡುವೆನು ಎಂಬ ನಿರೀಕ್ಷೆ ನಂಬಿಕೆ ಇತ್ತು. ಆದ್ದರಿಂದ ಅವನು ಹೀಗೆ ಹೇಳುತ್ತಾನೆ "ನಾನಂತು ನನ್ನ ವಿಮೋಚಕನು ಜೀವಸ್ವರೂಪನೆಂದು ಬಲ್ಲೆನು. ಆತನು ಕಡೆಗೆ ಧೂಳಿನ ಮೇಲೆ ಸಾಕ್ಷಿಯಾಗಿ ನಿಂತುಕೊಳ್ಳುವನು. ನನ್ನ ಚರ್ಮವು ಹೀಗೆ ಬಿರಿದು ಹಾಳಾದ ಬಳಿಕ ನಿರ್ದೇಹನಾಗಿ ದೇವರನ್ನು ನೋಡುವೆನು, ಕಣ್ಣಾರೆ ಕಾಣುವೆನು. ನಾನೇ ನಾನಾಗಿ ನೋಡುವೆನು, ಮತ್ತೊಬ್ಬನಾಗಿ ಅಲ್ಲ" ಎಂದು (ಯೋಬ. 19:25–27).

ದೇವಜನರೇ, ಕ್ರಿಸ್ತನಲ್ಲಿ ಸತ್ತವರು ಕ್ರಿಸ್ತನು ಬರುವಾಗ ಜೀವದಿಂದ ಎಬ್ಬಿಸಲ್ಪಡುವರು. ಇನ್ನೂ ಜೀವದಿಂದಿರುವವರು ಕ್ರಿಸ್ತನನ್ನು ಎದುರುಗೊಳ್ಳಲು ರೂಪಾಂತರ ಹೊಂದುವರು ಎಂಬುದು ಕ್ರೈಸ್ತ ಮಾರ್ಗದ ನಂಬಿಕೆ. ಈ ನಂಬಿಕೆಯು ಬೀಜವಾದ ವಾಕ್ಯವು. ಜೀವವಾದ ಕ್ರಿಸ್ತನು ಈ ನಂಬಿಕೆಯೊಂದಿಗೆ ದೇವರ ವಾಕ್ಯವನ್ನು ಬಿತ್ತಿರಿ.

*ನೆನಪಿಗೆ : "ಬಿತ್ತುವವನಿಗೆ ಬೀಜವನ್ನೂ, ಉಣ್ಣುವವನಿಗೆ ಆಹಾರವನ್ನೂ ಕೊಡುವಾತನು ನಿಮಗೂ ಬಿತ್ತುವದಕ್ಕೆ ಬೀಜವನ್ನು ಕೊಟ್ಟು ಹೆಚ್ಚಿಸಿ ನಿಮ್ಮ ಧರ್ಮಕಾರ್ಯಗಳಿಂದಾಗುವ ಫಲಗಳನ್ನು ವೃದ್ಧಿಪಡಿಸುವನು" (2 ಕೊರಿಂಥ 9:10).*

ಏಪ್ರಿಲ್ 14

## ಬಿತ್ತುವವನು!

ಬೆಳಿಗ್ಗೆ : 1 ಸಮು 25,26
ಸಂಜೆ : ಲೂಕ. 12:35–59

"ಕೇಳಿರಿ, ಬಿತ್ತುವವನು ಬಿತ್ತುವದಕ್ಕೆ ಹೊರಟನು; ಬಿತ್ತುವಾಗ ಕೆಲವು ಬೀಜ ದಾರಿಯ ಮಗ್ಗುಲಲ್ಲಿ ಬಿದ್ದವು" (ಮಾರ್ಕ. 4:3,4).

ಈ ಪ್ರಪಂಚ, ದೊಡ್ಡ ಹೊಲವಾಗಿದೆ. ನೀವು ಪ್ರಪಂಚದಾದ್ಯಂತ ಹೋಗಿ ಸಕಲ ಸೃಷ್ಟಿಗೆ ಸುವಾರ್ತೆಯನ್ನು ಸಾರಬೇಕೆಂದು ಯೇಸುಕ್ರಿಸ್ತನು ಹೇಳಿರುವನು. ನೀವು ಬಿತ್ತಬೇಕಾದ ಭೂಮಿ ಮನುಷ್ಯನ ಆಂತರ್ಯವೇ ಆಗಿದೆ. ಈ ಲೋಕದಲ್ಲಿ ಹುಟ್ಟಿದ ಪ್ರತಿಯೊಬ್ಬನೂ ಸತ್ಯವನ್ನು ಅರಿತುಕೊಳ್ಳಬೇಕಾಗಿದೆ. ಪವಿತ್ರಾತ್ಮನು ತಾನೇ ನಿಮ್ಮನ್ನು ಸಕಲ ಸತ್ಯದೊಳಗೆ ನಡೆಸಲಿ!

ಮಾರ್ಕ 4ನೇ ಅಧ್ಯಾಯದಲ್ಲಿ ನಾಲ್ಕು ರೀತಿಯ ನೆಲದ ಕುರಿತಾಗಿ ಓದುತ್ತೇವೆ. 1. ದಾರಿ ಮಗ್ಗುಲಲ್ಲಿರುವ ನೆಲ. ಈ ಭಾಗದಲ್ಲಿ ಬಿತ್ತುವಾಗ, ವಾಕ್ಯವಾದ ಬೀಜ ಆಂತರ್ಯದ ಆಳಕ್ಕೆ ಹೋಗುವದಿಲ್ಲ. ನೆಲದ ಮೇಲೆಯೇ ಬೀಳುವದರಿಂದ ಆಕಾಶದ ಹಕ್ಕಿಗಳು ಬಂದು ತಿಂದುಬಿಡುತ್ತವೆ. ಕೆಲವರು ಸತ್ಯವೇದವನ್ನು ಓದುವದು ಹಾಗೆಯೇ. ಏನೋ ಒಂದು ಕರ್ತವ್ಯಕ್ಕಾಗಿ, ಒಂದೆರಡು ವಾಕ್ಯಗಳನ್ನು ಓದಿ ಮುಚ್ಚಿಡುತ್ತಾರೆ. ಆ ವಾಕ್ಯಗಳನ್ನು ಹೃದಯದಾಳಕ್ಕೆ ತೆಗೆದುಕೊಳ್ಳುವದಿಲ್ಲ. ಐದು ನಿಮಿಷ ಬಿಟ್ಟು, ನೀವು ಏನು ಓದಿದಿರಿ ಎಂದು ಕೇಳಿದರೆ ಅವರಿಗೆ ಹೇಳಲಾಗುವದಿಲ್ಲ. ಪ್ರಸಂಗದ ಸಮಯದಲ್ಲಿ ತೂಕಡಿಸುವರು. ಸೈತಾನನು ಸತ್ಯವೇದ ವಾಕ್ಯಗಳನ್ನು ಆರಿಸಿಕೊಂಡು ಹೋಗಿಬಿಡುವನು. ಎರಡನೆಯ ನೆಲ ಅದರಲ್ಲಿ ತಕ್ಕ ಮಣ್ಣಿಲ್ಲದೇ ಬಂಡೆಯ ನೆಲವಾಗಿರುತ್ತದೆ. ಅಂಥವರು ವಾಕ್ಯವನ್ನು ಒಂದು ರೀತಿಯಲ್ಲಿ ಅಂಗೀಕರಿಸಿಕೊಳ್ಳುವರು. ಬೀಜವು ಮೊಳೆಯುವದು. ಆದರೆ ಆಳವಾಗಿ ದೃಢವಾಗಿ ಬೇರೂರಿ ನಿಲ್ಲದೆ ಇರುವದರಿಂದ ವಾಕ್ಯದ ನಿಮಿತ್ತ ಕಷ್ಟಗಳೂ, ಉಪದ್ರವಗಳೂ ಬಂದ ಕೂಡಲೆ ಎಡವಿ ಬೀಳುವರು. ಮೂರನೆಯ ರೀತಿಯ ನೆಲ ಮುಳ್ಳುಗಿಡಗಳ ನೆಲ. ಮುಳ್ಳುಗಳೆಂಬುದು ಲೋಕದ ಚಿಂತೆ ಐಶ್ವರ್ಯದ ಅಮಲು ಇವುಗಳನ್ನು ಸೂಚಿಸುತ್ತದೆ. ಕೆಲವರಿಗೆ ಹಲವು ರೀತಿಯ ಇಚ್ಛೆಗಳು ಉಂಟಾಗುತ್ತವೆ. ವಾಕ್ಯದಲ್ಲಿ ಆಳವಾಗಿ ಬೇರೂರದೆ ಇರುವದರಿಂದ ಅವು ಆತ್ಮೀಕ ಜೀವಿತವನ್ನು ಹಾಳುಮಾಡಿಬಿಡುತ್ತವೆ. ನಾಲ್ಕನೆಯದಾಗಿ, ಯಾರು ತಮ್ಮ ಹೃದಯುವನ್ನು ಒಳ್ಳೆಯ ನೆಲವಾಗಿ ಹಸನುಮಾಡಿ ದೇವರು ನನ್ನೊಂದಿಗೆ ಮಾತನಾಡಲಾರನಾ? ಆತನ ವಾಕ್ಯಗಳು ನನಗೇನು ಹೇಳುತ್ತದೆ? ಎಂದು ಕಾತರದಿಂದಲೂ ದಾಹದಿಂದಲೂ ಕರ್ತನ ವಾಕ್ಯಗಳಿಗೆ ಕಿವಿಗೊಡುತ್ತಾರೋ ಅಂಥವರು ಕರ್ತನಲ್ಲಿ ದೃಢವಾಗಿ ನಿಂತು ತಕ್ಕಕಾಲದಲ್ಲಿ ಮೂವತ್ತರಷ್ಟು, ಅರವತ್ತರಷ್ಟು, ನೂರರಷ್ಟು ಫಲಕೊಡುವರು. ದೇವಜನರೇ, ಕರ್ತನ ವಾಕ್ಯಗಳು ಬಿತ್ತಲ್ಪಡುವಾಗ, ಅದನ್ನು ಪೂರ್ಣ ಮನಸ್ಸಿನಿಂದ ಅಂಗೀಕರಿಸಿರಿ. ನಿಮ್ಮ ಆಂತರ್ಯ ಹಸನಾದ ನೆಲವಾಗಿರಲಿ. ಕರ್ತನಿಗಾಗಿ ಹೆಚ್ಚೆಚ್ಚಾಗಿ ಫಲನೀಡಿರಿ.

*ನೆನಪಿಗೆ : "ಮತ್ತೆ ಕೆಲವರು ವಾಕ್ಯವನ್ನು ಕೇಳಿ ಕೈಕೊಂಡು, ಮೂವತ್ತರಷ್ಟಾಗಲಿ, ಅರವತ್ತರಷ್ಟಾಗಲಿ, ನೂರರಷ್ಟಾಗಲಿ ಫಲವನ್ನು ಕೊಡುತ್ತಾರೆ. ಇವರೇ ಬೀಜಬಿದ್ದ ಒಳ್ಳೆಯ ನೆಲವಾಗಿರುವವರು" (ಮಾರ್ಕ. 4:20).*



ಏಪ್ರಿಲ್ 15

## ಕನ್ನಡಿ!

ಬೆಳಿಗ್ಗೆ : 1 ಸಮು 27,28,29
ಸಂಜೆ : ಲೂಕ. 13:1–21

"ಯಾವನಾದರೂ ವಾಕ್ಯವನ್ನು ಕೇಳುವವನಾದರೂ, ಅದರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿದ ಮನುಷ್ಯನಂತಿರುವನು" (ಯಾಕೋಬ 1:23).

ಸತ್ಯವೇದ ವಾಕ್ಯವು ಮುಖ ನೋಡಿಕೊಳ್ಳುವ ಕನ್ನಡಿಗೆ ಹೋಲಿಸಲಾಗಿದೆ. ಒಬ್ಬ ಮನುಷ್ಯನು ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿ ತನ್ನ ಸ್ವರೂಪ ಹೇಗಿದೆ ಎಂಬುದನ್ನು ತಿಳಿದುಕೊಳ್ಳುವನು. ಆದರೆ ಸತ್ಯವೇದವೆಂಬ ಕನ್ನಡಿ ಮನುಷ್ಯನ ಆಂತರ್ಯವನ್ನು ಅವನ ಸ್ವಭಾವವನ್ನು ಅವನಿಗೆ ತೋರಿಸುತ್ತದೆ.

ಕೆಲವು ಹೆಣ್ಣುಮಕ್ಕಳು ತಮ್ಮ ಕೈಚೀಲಗಳಲ್ಲಿ ಚಿಕ್ಕ ಕನ್ನಡಿಯನ್ನು ಇಟ್ಟುಕೊಂಡಿರುತ್ತಾರೆ. ಆಗಾಗ್ಗೆ ತಮ್ಮ ಮುಖವನ್ನು ನೋಡಿಕೊಳ್ಳುವರು. ತಲೆಗೂದಲು ಕೆದರಿದ್ದರೆ ಸರಿಪಡಿಸಿಕೊಳ್ಳುವರು. ಹಾಗೆಯೇ ಸತ್ಯವೇದವನ್ನು ಓದುವಾಗ, ದೇವರ ವಾಕ್ಯಗಳು ನಮ್ಮ ಆತ್ಮದ ಸ್ಥಿತಿಯನ್ನು ನಮಗೆ ತೋರಿಸುವದರಿಂದ ನಮ್ಮನ್ನು ನಾವೇ ಶುದ್ಧಪಡಿಸಿಕೊಳ್ಳಲು ಸಹಾಯಿಸುತ್ತದೆ. ಒಮ್ಮೆ ಒಂದು ಕೋತಿಗೆ ಒಂದು ಕನ್ನಡಿ ಸಿಕ್ಕಿತು. ಅದನ್ನು ತೆಗೆದುಕೊಂಡು ತನ್ನ ಮುಖವನ್ನು ನೋಡಿಕೊಂಡಿತು. ಅದಕ್ಕೆ ಕೋಪ ಬಂದುಬಿಟ್ಟಿತು. "ನಾನು ಎಷ್ಟೊಂದು ಸುಂದರವಾಗಿದ್ದೇನೆ. ಇದೇನು ಈ ಕನ್ನಡಿ ನನ್ನನ್ನು ಕೋತಿಯಂತೆ ತೋರಿಸುತ್ತಿದೆ" ಎಂದು ಕೋಪದಿಂದ ಕನ್ನಡಿಯನ್ನು ದೂರ ಸರಿಸಿತು. ಐದು ನಿಮಿಷ ಬಿಟ್ಟು ಕನ್ನಡಿಯ ಕಡೆ ಬಾಗಿನೋಡಿತು. ಕೋತಿಯಂತ ರೂಪವನ್ನು ಕಂಡು ಅದರ ಕೋಪ ಇನ್ನೂ ಅಧಿಕಗೊಂಡು ಕನ್ನಡಿಯನ್ನು ದೂರಕ್ಕೆ ಎಸೆದುಬಿಟ್ಟಿತು. ಕನ್ನಡಿ ಒಡೆದು ಚೂರಾಯಿತು. ಕೋಪ ಕಡಿಮೆಯಾದ ಮೇಲೆ ಕನ್ನಡಿಯಲ್ಲೇ ಏನೋ ದೋಷವಿರಬಹುದೆಂದು ಒಡೆದು ಹೋದ ಕನ್ನಡಿಯ ಚೂರೊಂದನ್ನು ತೆಗೆದುಕೊಂಡು ನಿಧಾನವಾಗಿ ನೋಡಿತು. ಒಂದೊಂದು ಚೂರು ಆ ಕೋತಿಯನ್ನೇ ತೋರಿಸುತ್ತಿತ್ತು. ಹೌದು ಆತ್ಮದ ಕುರೂಪವನ್ನು ತೋರಿಸುವಂಥದ್ದು ಒಂದು ಇರುವದೆಂದರೆ ಅದು ಸತ್ಯವೇದ ಪುಸ್ತಕ ಒಂದೇ. ಅದು ನಮ್ಮನ್ನು ಶುದ್ಧಪಡಿಸಿಕೊಳ್ಳುವಂತೆ ಪ್ರೇರೇಪಿಸುವದು.

ದೇವಜನರೇ, ನೀವು ಸತ್ಯವೇದವನ್ನು ತೆರೆದು ಓದುವಾಗೆಲ್ಲಾ "ದೇವರೇ, ನೀನು ನನ್ನಲ್ಲಿರುವ ಕೊರತೆಗಳನ್ನು, ತಪ್ಪುಗಳನ್ನು ತೋರಿಸಿಕೊಡು ನಾನು ಯಾವದರಲ್ಲಿ ತಪ್ಪಿದ್ದೇನೆ? ಯಾವದನ್ನು ನನ್ನಿಂದ ದೂರಮಾಡಬೇಕು? ಹೇಳು ಎಂದು ಕೇಳಿರಿ. ನಿಮ್ಮನ್ನು ನೀವು ಪರೀಕ್ಷಿಸಿಕೊಳ್ಳುವಿರಾದರೆ, ನೀವು ನ್ಯಾಯ ತೀರ್ಪಿಗೆ ತಪ್ಪಿಸಿಕೊಳ್ಳುವಿರಿ.

*ನೆನಪಿಗೆ : "ನಾನು ಕೇಡಿನ ಮಾರ್ಗದಲ್ಲಿರುತ್ತೇನೋ ಏನೋ ನೋಡಿ ಸನಾತನ ಮಾರ್ಗದಲ್ಲಿ ನನ್ನನ್ನು ನಡಿಸು" (ಕೀರ್ತನೆ. 139:24).*

ಏಪ್ರಿಲ್ 16

## ದೇವರ ವಾಕ್ಯವೆಂಬ ಕತ್ತಿ!

ಬೆಳಿಗ್ಗೆ : 1 ಸಮು 30,31
ಸಂಜೆ : ಲೂಕ. 13:22–35

"ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ" (ಎಫೆ. 6:17).

ದೇವರ ವಾಕ್ಯವನ್ನು ಕತ್ತಿಗೆ ಹೋಲಿಸಲಾಗಿದೆ. ಕತ್ತಿಯು ಶತ್ರುವನ್ನು ತಾಗಿ ನಾಶಮಾಡುವ ಒಂದು ಆಯುಧವಾಗಿದೆ. ಯುದ್ಧಕಾಲದಲ್ಲಿ ಸೈನಿಕರು ಎರಡು ರೀತಿಯ ಆಯುಧಗಳನ್ನು ಉಪಯೋಗಿಸುವರು. ಒಂದು ತಮ್ಮನ್ನು ಕಾಪಾಡುವ ಆಯುಧವಾದ ಶಿರಸ್ತ್ರಾಣ, ರಕ್ಷಾಕವಚ ಮತ್ತು ಪಾದರಕ್ಷೆ. ಅದೇ ವೇಳೆಯಲ್ಲಿ ಶತ್ರುವನ್ನು ಹೊಡೆದುರುಳಿಸುವಂಥ ಕತ್ತಿ. ಅದರಂತೆಯೇ ಕರ್ತನು ನಮ್ಮ ಕೈಗಳಲ್ಲಿ ಕೊಟ್ಟಿರುವ ಆಯುಧಗಳೆಂದರೆ, ನಮ್ಮನ್ನು ಕಾಪಾಡಿಕೊಳ್ಳಲು ರಕ್ಷಣೆಯೆಂಬ ಶಿರಸ್ತ್ರಾಣ ಹಾಗೂ ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿ.

ಯೇಸುಕ್ರಿಸ್ತನು ನಾಲ್ವತ್ತುದಿನಗಳು ಉಪವಾಸವಿದ್ದಾಗ, ಆತನನ್ನು ಶೋಧನೆಗೆ ಒಳಪಡಿಸಲು ಸೈತಾನನು ಬಂದಾಗ, ಕರ್ತನು ತನ್ನ ವಾಕ್ಯವೆಂಬ ಕತ್ತಿಯನ್ನು ಝುಳಪಿಸಿದನು. "ಬರೆದದೆ" ಎಂದು ಹೇಳಿ, ವಾಕ್ಯದ ಮೂಲಕ ಅವನನ್ನು ಎದುರಿಸಿದನು. ಸೈತಾನನು ಓಡಿಹೋದನು. ಯೇಸುಕ್ರಿಸ್ತನು ಎಲ್ಲಾ ಸಂದರ್ಭಗಳಲ್ಲಿಯೂ ಸತ್ಯವೇದ ವಚನಗಳನ್ನು ಉಪಯೋಗಿಸಿದನು. ಆದ್ದರಿಂದಲೇ, ಆತನ ಜ್ಞಾನ ವೇದ ಪಂಡಿತರು, ಸದ್ದುಕಾಯರು, ಪರಿಸಾಯರು ಶಾಸ್ತ್ರಿಗಳು ಇವರಿಗಿಂತ ಹೆಚ್ಚಿನದಾಗಿತ್ತು. ಸೈತಾನನನ್ನು ಎದುರಿಸಿ ನಿಲ್ಲಲು ಯಾವ ಯಾವ ವಾಗ್ದಾನಗಳನ್ನು ಕರ್ತನು ಕತ್ತಿಯಾಗಿ ನಮಗೆ ಕೊಟ್ಟಿರುವನು? ವ್ಯಾಧಿಗಳನ್ನು ಗುಣಪಡಿಸಲು ಯಾವ ಯಾವ ವಾಗ್ದಾನಗಳನ್ನು ಕೊಟ್ಟಿರುವನು? ಶಾಪಗಳನ್ನು ಮುರಿಯಲು ಯಾವ ಯಾವ ವಾಗ್ದಾನಗಳನ್ನು ಕೊಟ್ಟಿರುವನು? ಎಂಬುದನ್ನು ನೀವು ತಿಳಿದಿರಬೇಕು. ಆಯಾ ಸಂದರ್ಭಕ್ಕೆ ತಕ್ಕಂತೆ ವಾಗ್ದಾನ ವಚನಗಳನ್ನು ಹಿಡಿದುಕೊಂಡು ಸೈತಾನನನ್ನು ಎದುರಿಸಿ ನಿಲ್ಲುವಾಗ ಸಮಸ್ಯೆಗಳೆಲ್ಲಾ ಹಾರಿಹೋಗುವವು. ಆಗ ಸೈತಾನನ ಅಗ್ನಿ ಅಸ್ತ್ರಗಳು ನಿಮ್ಮ ಮುಂದೆ ನಿಲ್ಲಲು ಸಾಧ್ಯವೇ ಇಲ್ಲ.

ದೇವಜನರೇ, ಸೈತಾನನ ತಂತ್ರಗಳನ್ನು ಎದುರಿಸಿ ನಿಲ್ಲಲು ಆತ್ಮನ ಖಡ್ಗವನ್ನು ಎತ್ತಿಕೊಳ್ಳಿರಿ. ಅವನನ್ನು ಎದುರಿಸಿ ನಿಲ್ಲಿರಿ, ಆಗ ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು. ಸಮಯೋಚಿತ ವಾಗ್ದಾನ ವಚನಗಳನ್ನು ಉಪಯೋಗಿಸಲು ಅಭ್ಯಾಸ ಮಾಡಿಕೊಳ್ಳಿರಿ. ಆಗ ನೀವು ಜಯಶಾಲಿಗಳಾಗುವಿರಿ.

*ನೆನಪಿಗೆ : "ಅವರ ಬಾಯಲ್ಲಿ ಯೆಹೋವನ ಸ್ತೋತ್ರವೂ ಕೈಯಲ್ಲಿ ಇಬ್ಬಾಯಿ ಕತ್ತಿಯೂ ಇರಲಿ" (ಕೀರ್ತನೆ 149:6).*



ಏಪ್ರಿಲ್ 17

## ತಿಳಿಜೇನು!

ಬೆಳಿಗ್ಗೆ : 2 ಸಮು 1,2
ಸಂಜೆ : ಲೂಕ. 14:1–24

"ಅವು ಜೇನಿಗಿಂತಲೂ, ಶೋಧಿಸಿದ ಜೇನು ತುಪ್ಪಕ್ಕಿಂತಲೂ ಸಿಹಿಯಾಗಿವೆ" (ಕೀರ್ತನೆ.19:10).

ಅರಸನಾದ ದಾವೀದನು ಸತ್ಯವೇದ ವಾಕ್ಯಗಳನ್ನು ಶೋಧಿಸಿದ ಜೇನುತುಪ್ಪಕ್ಕೆ ಹೋಲಿಸಿರುವನು. ಜೇನು ಎಷ್ಟು ಮಧುರವಾಗಿರುವದೋ, ದೇವರ ವಾಕ್ಯಗಳೂ ಅಷ್ಟೇ ಸಿಹಿಯಾಗಿರುವದು. ಅನೇಕರಿಗೆ ಸತ್ಯವೇದದ ರುಚಿ, ಅದರ ಬೆಲೆ ಗೊತ್ತಿಲ್ಲ. ಕರ್ತವ್ಯವಾಗಿಯೋ, ಪಾರಂಪರ್ಯವಾಗಿಯೋ, ಸತ್ಯವೇದವನ್ನು ಓದುವರು. ಕೆಲವರು ತಮ್ಮ ಮಕ್ಕಳಿಗೆ ಸತ್ಯವೇದವನ್ನು ಓದುವಂತೆ ಹೇಳುವಾಗ, ಆ ಮಕ್ಕಳ ಮುಖ ಹರಳೆಣ್ಣೆ ಕುಡಿದವರಂತೆ ಇರುವದು. ಸತ್ಯವೇದದ ರುಚಿ, ಮಹತ್ವವನ್ನು ತಿಳಿಯದವರು, ಇಹಲೋಕ ಭೋಗಗಳ ಮತ್ತಿನಲ್ಲಿ ಬೀಳುವವರಾಗಿರುತ್ತಾರೆ.

ಜೇನು ನೊಣಗಳು, ಅನೇಕ ಹೂವುಗಳಿಂದ ಮಕರಂದವನ್ನು ಹೀರಿ ತಂದು ಗೂಡುಗಳಲ್ಲಿ ಶೇಖರಿಸಿ ಇಡುವಂತೆ ಸತ್ಯವೇದದಲ್ಲಿ ಅನೇಕ ದೈವ ಜ್ಞಾನಿಗಳು, ಪರಲೋಕದ ಸತ್ಯಗಳನ್ನು ಹೀರಿ, ಅವುಗಳನ್ನು ಗ್ರಂಥಗಳಾಗಿ ಬರೆದಿಟ್ಟಿರುವರು. ಆ ಗ್ರಂಥಗಳ ಸಮೂಹವೇ ಸತ್ಯವೇದ. ಪ್ರತಿಯೊಬ್ಬ ಗ್ರಂಥ ಕರ್ತನು ಜೀವಿಸಿದ್ದ ಕಾಲಮಾನ ಸ್ಥಿತಿ ಬೇರೆ ಬೇರೆಯಾಗಿದ್ದರೂ, ಬೇರೆ ಬೇರೆ ಭಾಷೆಗಳಲ್ಲಿ ಬರೆದಿದ್ದರೂ, ಅವುಗಳಲ್ಲಿರುವ ಸತ್ಯ ಸಂದೇಶ ಎಲ್ಲವೂ ಒಂದೇ ರೀತಿಯಾಗಿರುವದು ಕಂಡು ಬರುವದು. ಇದರಿಂದ ಅರ್ಥವಾಗುವದೇನೆಂದರೆ, ಇವರೆಲ್ಲರೂ ಪವಿತ್ರಾತ್ಮನಿಂದ ಪ್ರೇರೇಪಿಸಲ್ಪಟ್ಟವರಾಗಿ, ಬರೆದಂಥಹ ಪುಸ್ತಕಗಳಾಗಿವೆ ಎಂಬುದು ದೇವರು ತಾನೇ ಮಾನವ ಕುಲಕ್ಕೆ ಕೊಟ್ಟ ಸಂದೇಶ, ಎಚ್ಚರಿಕೆಯ ಮಾತುಗಳು. ಆತನ ವಾಗ್ದಾನಗಳು, ಆಶೀರ್ವಾದಗಳು ಈ ಸತ್ಯವೇದದಲ್ಲಿ ಅಡಕವಾಗಿರುವದು.

ದೇವಜನರೇ, ಜೇನಿನಲ್ಲಿ ಒಂದು ವಿಶೇಷ ಗುಣವಿರುವದು. "ಅದು ಕಣ್ಣುಗಳನ್ನು ಕಳೆಗೊಳಿಸುವದು. ಯೋನಾತಾನನು ತನ್ನ ಕೋಲನ್ನು ಜೇನು ತೊಟ್ಟಿಯಲ್ಲಿ ಚುಚ್ಚಿ ಕೈಯಿಂದ ತೆಗೆದು ಅದನ್ನು ತಿಂದಾಗ ಅವನ ಕಣ್ಣುಗಳು ಕಳೆಗೊಂಡವು" (1 ಸಮು. 14:27) ಎಂದು ಸತ್ಯವೇದ ಹೇಳುತ್ತದೆ. ಹಾಗೆಯೇ, ದೇವರ ವಾಕ್ಯವೆಂಬ ಜೇನನ್ನು ಓದಿ ಸ್ವೀಕರಿಸುವಾಗ ಅಂತರ್ಯದಲ್ಲಿರುವ ಕುರುಡುತನ ನೀಗಿ ಆತ್ಮೀಕ ಕಣ್ಣುಗಳನ್ನು ತೆರೆಯುವದು. ಆದ್ದರಿಂದ ಸತ್ಯವೇದವನ್ನು ಬಯಸಿ ಓದಿ ಧ್ಯಾನಿಸಿರಿ. ಜಯದ ಜೀವಿತವನ್ನು ನಿಮ್ಮದಾಗಿಸಿಕೊಳ್ಳಿರಿ.

*ನೆನಪಿಗೆ : "ನಾನು ಬಾಯಿ ತೆರೆಯಲು ಆತನು ಆ ಸುರಳಿಯನ್ನು ನನಗೆ ತಿನ್ನಿಸಿದನು.... ಅದು ನನ್ನ ಬಾಯಲ್ಲಿ ಜೇನಿನಂತೆ ಸಿಹಿಯಾಗಿತ್ತು" (ಯೆಹೆ. 3:2,3).*

ಏಪ್ರಿಲ್ 18

## ಆತ್ಮಕ್ಕೆ ಸಿದ್ಧೌಷಧ!

ಬೆಳಿಗ್ಗೆ : 2 ಸಮು 3,4,5
ಸಂಜೆ : ಲೂಕ. 14:25–35

"ಕಂದಾ, ನನ್ನ ಮಾತುಗಳನ್ನು ಆಲಿಸು, ನನ್ನ ನುಡಿಗಳಿಗೆ ಕಿವಿಗೊಡು. ಅವುಗಳನ್ನು ಹೊಂದುವವರಿಗೆ ಅವು ಜೀವವು, ದೇಹಕ್ಕೆಲ್ಲಾ ಅದೇ ಆರೋಗ್ಯವು" (ಜ್ಞಾನೋ. 4:20,22).

ಸತ್ಯವೇದ ವಾಕ್ಯವು, ಆರೋಗ್ಯವನ್ನು ನೀಡುವ ಸಿದ್ಧೌಷದವಾಗಿದೆ. ಪ್ರಾಪಂಚಿಕರು, ಇದರ ಶ್ರೇಷ್ಠತೆಯನ್ನು ಅರಿಯದವರಾಗಿರುವರು. ನೀತಿ ನ್ಯಾಯಗಳು ಕ್ರಮ ತಪ್ಪಿ ಹೋಗಿರುವದರಿಂದ ಜನರು ಆತ್ಮದಲ್ಲಿ ವ್ಯಾಧಿಗೆ ಒಳಪಟ್ಟಿರುವರು. ಪ್ರವಾದಿಯಾದ ಯೆಶಾಯನ ಮೂಲಕ ಕರ್ತನು ಹೀಗೆ ಹೇಳುತ್ತಾನೆ– "ಏಕೆ ದ್ರೋಹವನ್ನು ಹೆಚ್ಚಿಸಿ ಪೆಟ್ಟಿಗೆ ಗುರಿಯಾಗುತ್ತೀರಿ? ತಲೆಯೆಲ್ಲಾ ರೋಗ ಹೃದಯವೆಲ್ಲಾ ದುರ್ಬಲ. ಅಂಗಾಲಿನಿಂದ ನಡುನೆತ್ತಿಯ ತನಕ ಪೆಟ್ಟು ಬಾಸುಂಡೆ ಮಾಗದ ಗಾಯಗಳೇ ಹೊರತು ಏನೂ ಸೌಖ್ಯವಿಲ್ಲ? (ಯೆಶಾ. 1:5,6) ಎಂದು.

ಮನುಷ್ಯನು ಪಾಪ ಮಾಡುವಾಗ, ಪಾಪದ ನಿಮಿತ್ತ ಅವನ ಆತ್ಮ ಕಲುಷಿತಗೊಳ್ಳುವದು. ಮರಣವು ಆತ್ಮವನ್ನು ಆವರಿಸಿಕೊಳ್ಳುವದು. ದಾವೀದನು ಪಾಪ ಮಾಡಿದಾಗ "ದೇವರೇ ನನ್ನ ಆತ್ಮವನ್ನು ಗುಣಪಡಿಸು, ನಾನು ನಿನಗೆ ವಿರೋಧವಾಗಿ ಪಾಪ ಮಾಡಿದ್ದೇನೆ" ಎಂದು ಹಲುಬಿದನು. ವ್ಯಾಧಿಯುಳ್ಳ ಒಬ್ಬ ಮನುಷ್ಯ ವೈದ್ಯರ ಬಳಿ ಹೋದಾಗ, ವೈದ್ಯರು ತಕ್ಕ ಔಷಧಿಯನ್ನು ಕೊಟ್ಟು ಬೆಳಿಗ್ಗೆ ಮಧ್ಯಾಹ್ನ ರಾತ್ರಿ ಸೇವಿಸುವಂತೆ ಹೇಳುವರು. ಅವನು ಗುಣಹೊಂದುವನು. ಹಾಗೆಯೇ ದೇವರ ವಾಕ್ಯಗಳು ವ್ಯಾಧಿಗ್ರಸ್ಥವಾದ ಆತ್ಮವನ್ನು ಗುಣಪಡಿಸಲು ಶಕ್ತವುಳ್ಳದ್ದಾಗಿದೆ. ಅದು ಆತ್ಮಕ್ಕೆ ಒಳ್ಳೆಯ ಔಷಧವಾಗಿದೆ. ಅನೇಕರ ಆತ್ಮ, ತಪ್ಪಿತಸ್ಥ ಮನೋಭಾವದಿಂದ ಬಾಧಿಸಲ್ಪಟ್ಟು, ಬಾಧೆಗೆ ಒಳಗಾಗುವಾಗ, ಆಂತರ್ಯದಲ್ಲಿ ಸಂತೋಷ ಸಮಾಧಾನವಿರುವದಿಲ್ಲ. ಯೇಸುಕ್ರಿಸ್ತನ ರಕ್ತ ಸಕಲ ಪಾಪಗಳನ್ನು ನೀಗಿಸಿ ನಿಮ್ಮನ್ನು ಶುದ್ಧೀಕರಿಸುವದು. ಕ್ರಿಸ್ತನ ಕೃಪೆಯಿಂದ ಕರ್ತನ ವಾಕ್ಯಗಳಿಂದ ಪಾಪಕ್ಷಮಾಪಣೆಯನ್ನು ಹೊಂದಿಕೊಳ್ಳಬಹುದು. ರಕ್ಷಣೆಯ ಸಂತೋಷವನ್ನು ಪಡೆದು ಕೊಳ್ಳಬಹುದು.

ದೇವಜನರೇ, ಪ್ರತಿದಿನವೂ ಸತ್ಯವೇದವನ್ನು ಓದಿ ಧ್ಯಾನಿಸುವಿರಾದರೆ, ವ್ಯಾಧಿಪೀಡಿತವಾದ ನಿಮ್ಮ ಆತ್ಮ ಗುಣಹೊಂದುವದು. ಚೈತನ್ಯಗೊಳ್ಳುವದು. ಕರ್ತನಲ್ಲಿ ಉತ್ಸಾಹಗೊಳ್ಳುವಿರಿ. ಗಿಲ್ಯಾದಿನ ಎಣ್ಣೆ ಸತ್ಯವೇದ ವಾಕ್ಯವೇ (ಯೆರೆ. 8:22). ಆತನ ಬಾಸುಂಡೆಗಳಿಂದ ಗುಣವಾಗುವೆವು (ಯೆಶಾ.53:5).

*ನೆನಪಿಗೆ : "ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು, ನಮ್ಮ ರೋಗಗಳನ್ನು ಹೊತ್ತುಕೊಂಡನು" ಎಂದು ಯೆಶಾಯನೆಂಬ ಪ್ರವಾದಿಯಿಂದ ಹೇಳಿರುವ ಮಾತು ನೆರವೇರಿತು (ಮತ್ತಾ. 8:17).*



ಏಪ್ರಿಲ್ 19

## ಮಳೆಯೂ, ಹಿಮವೂ!

ಬೆಳಿಗ್ಗೆ : 2 ಸಮು 6,7,8
ಸಂಜೆ : ಲೂಕ. 15:1–10

"ಮಳೆಯೂ, ಹಿಮವೂ ಆಕಾಶದಿಂದ ಬಿದ್ದು ಭೂಮಿಯನ್ನು ತೋಯಿಸಿ ಹಸಿರುಗೊಳಿಸಿ ಫಲಿಸುವಂತೆ ಮಾಡಿ.... ಅಕಾಶಕ್ಕೆ ಹಿಂದಿರುಗುವದಿಲ್ಲವೋ, ಹಾಗೆಯೇ ನನ್ನ ಬಾಯಿಂದ ಹೊರಟ ಮಾತು... ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ" (ಯೆಶಾ. 55:10,11).

ದೇವರ ವಾಕ್ಯವು "ಮಳೆಗೂ , ಹಿಮಕ್ಕೂ ಹೋಲಿಸಲಾಗಿದೆ". ಮಳೆಯ ಆಶೀರ್ವಾದಕ್ಕಿಂತ ಮಿಗಿಲಾದ ಆಶೀರ್ವಾದ ಈ ಪ್ರಪಂಚಕ್ಕೆ ಯಾವುದುಂಟು? ಕಳೆದ ವರ್ಷಗಳಲ್ಲಿ ಅನೇಕ ಕಡೆಗಳಲ್ಲಿ ಮಳೆಯ ಅಭಾವದಿಂದ ಜನರು ಕಂಗೆಟ್ಟುಹೋಗಿರುವದನ್ನು ಕಾಣುತ್ತಿದ್ದೇವೆ. ಅದೇ ರೀತಿಯಲ್ಲಿ ಮಳೆ ಹೇಗೆ ಈ ಪ್ರಪಂಚಕ್ಕೆ ಆಶೀರ್ವಾದವಾಗಿದೆಯೋ, ದೇವರ ವಾಕ್ಯಗಳೂ, ಮನುಷ್ಯರ ಆತ್ಮಗಳಿಗೆ ಆಶೀರ್ವಾದ ನೀಡುವಂಥದ್ದಾಗಿದೆ.

ಕರ್ತನು ಮಳೆಯನ್ನೂ, ಹಿಮವನ್ನೂ ಕೃಪೆಯಾಗಿ ಪ್ರಪಂಚಕ್ಕೆ ಕೊಟ್ಟಿರುವಂತೆ ಸತ್ಯವೇದ ವಾಕ್ಯಗಳನ್ನು ಭಾನುವಾರದ ಆರಾಧನೆಗಳಲ್ಲಿ ಮಳೆಯಂತೆ ಸುರಿಯಮಾಡುವನು. ಆ ಆರಾಧನೆಗಳಲ್ಲಿ ವಾಗ್ದಾನ ವಚನಗಳನ್ನು ಪಡೆದುಕೊಳ್ಳುತ್ತೇವೆ. ಆಂತರ್ಯವು ನವಚೈತನ್ಯವನ್ನು ಪಡೆದುಕೊಳ್ಳುವದು. ಕರ್ತನ ವಾಗ್ದಾನವೇನು? ಕಾಲಕ್ಕೆ ಸರಿಯಾಗಿ ಮಳೆಯನ್ನು ಸುರಿಸುವೆನು; ಶುಭದಾಯಕ ವೃಷ್ಟಿಯು ಆಗುವದು" (ಯೆಹೆಜ್ಕೇಲ. 34:26) ಎಂಬುದೇ! ಆದ್ದರಿಂದ ದೇವರ ವಾಕ್ಯವೆಂಬ ಮುಂಗಾರು ಹಿಂಗಾರುಮಳೆಯನ್ನು ವಿಶ್ವಾಸದಿಂದ ನಿರೀಕ್ಷಿಸಿರಿ. ಯೆಶಾಯನ ಪ್ರವಾದನೆಗಳೆಲ್ಲವೂ ಒಳ್ಳೆಯ ವಾಗ್ದಾನಗಳು, ಮಳೆಯಾಗಿಯೇ ಇರುವದು. ಕರ್ತನು ತನ್ನ ಸೇವಕರನ್ನು ಎಬ್ಬಿಸಿ ದೇವಜನರಿಗೆ ತಕ್ಕದ್ದಾದ ತನ್ನ ವಾಕ್ಯಗಳನ್ನು ತಿಳಿಯಪಡಿಸುವನು. ಎರಡನೆಯದಾಗಿ, ಕರ್ತನು ಸಾಕಾಗುವಷ್ಟು ಮಳೆಯನ್ನು ಸುರಿಯುವಂತೆ ಮಾಡುವನು. ಕರ್ತನು ಧಾರಾಳವಾಗಿ ತನ್ನ ಆಶೀರ್ವಾದವನ್ನು ಸುರಿಸುವಾಗ ಕೆರೆಕಟ್ಟೆಗಳು ತುಂಬಿ ಹೊಲಗದ್ದೆಗಳು ಫಲವತ್ತಾಗುವವು. ಹಾಗೆಯೇ ಸತ್ಯವೇದ ವಚನಗಳ ಮೂಲಕ ಸಭೆಗಳು ಬೆಳೆಯುವವು. ಆತ್ಮಗಳು ರಕ್ಷಿಸಲ್ಪಡುವದು. ಎಲ್ಲೆಲ್ಲೂ ಉಜ್ಜೀವನ ಪುಷ್ಟಿ ವಿಕಸಿಸುವದು. ಮೂರನೆಯದು ಮಳೆಗೆ ಪಕ್ಷಪಾತವಿಲ್ಲ. ಹಾಗೆಯೇ ಸತ್ಯವೇದ ವಾಕ್ಯ ಕ್ರೈಸ್ತರಿಗಾಗಿ ಮಾತ್ರವಲ್ಲ, ಅದು ಇಡೀ ಮಾನವಕುಲಕ್ಕೆ ಕರ್ತನು ಕೃಪೆಯಾಗಿ ನೀಡಿರುವನು. ಅದನ್ನು ಓದುವವನು ದೇವರನ್ನೇ ದೃಷ್ಟಿಸುವಾತನಾದರೆ ಅವನು ರಕ್ಷಿಸಲ್ಪಡುವನು.

ದೇವಜನರೇ, ಮಳೆಯಿಂದ ಭೂಮಿ ಫಲಿಸುವಂತೆ ನಿಮ್ಮ ಆತ್ಮೀಕ ಜೀವಿತವೂ ದೇವರ ವಾಕ್ಯಗಳ ಮೂಲಕ ಫಲಭರಿತವಾಗಲಿ.

*ನೆನಪಿಗೆ : ಭೂಮಿಯು ತನ್ನ ಮೇಲೆ ಅನೇಕಾವರ್ತಿ ಸುರಿಯುವ ಮಳೆಯನ್ನು ಹೀರಿಕೊಂಡು... ಅನುಕೂಲವಾದ ಬೆಳೆಯನ್ನು ಕೊಟ್ಟರೆ, ದೇವರ ಆಶೀರ್ವಾದವನ್ನು ಹೊಂದುತ್ತದೆ (ಇಬ್ರಿ.6:7).*

ಏಪ್ರಿಲ್ 20

## ಯೋಗ್ಯರಿಗೆ ವೇದವಾಕ್ಯ!

ಬೆಳಿಗ್ಗೆ : 2 ಸಮು 9,10,11
ಸಂಜೆ : ಲೂಕ. 15:11–32

"ಹೇಗೂ, ಕ್ರಿಸ್ತನ ಸುವಾರ್ತೆಗೆ ಯೋಗ್ಯರಾಗಿ ನಡೆದುಕೊಳ್ಳಿರಿ" (ಫಿಲಿಪ್ಪಿ. 1:27).

ದೇವರು ತನ್ನ ಮಹಿಮೆಯಾದ ಸುವಾರ್ತೆಯನ್ನು ದೇವದೂತರನ್ನೇ ನಂಬಿಕೊಡದೆ, ಸಾಧಾರಣ ಮನುಷ್ಯರಾದ ನಮ್ಮನ್ನು ನಂಬಿ, ನಮ್ಮ ಕೈಗಳಲ್ಲಿ ಕೊಟ್ಟಿರುವನು. ನೀವು ಲೋಕದ ಎಲ್ಲಾ ಕಡೆಗಳಲ್ಲಿಯೂ ಸುವಾರ್ತೆಯನ್ನು ಸಾರಿರಿ ಎಂದು ಹೇಳಿದನು (ಮತ್ತಾ. 28,19). ನಿಮಗೆ ಒಪ್ಪಿಸಿಕೊಟ್ಟಿರುವ ರಕ್ಷಣೆಯ ಸುವಾರ್ತೆ ಮನುಷ್ಯನನ್ನು ರೂಪಾಂತರಗೊಳಿಸುವ ಸುವಾರ್ತೆಯಾಗಿರುವದು. ರಕ್ತ ಕ್ರಯ ಕೊಟ್ಟು ಕಲ್ವಾರಿಯಲ್ಲಿ ಪಡೆದ ಸುವಾರ್ತೆಯಾಗಿರುವದು. ಇದು ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯಾಗಿರುವದು (2 ಕೊರಿಂ. 4:4).

ನಮ್ಮ ಭಾರತ ದೇಶಕ್ಕೆ ಈ ಮಹಿಮೆಯಾದ ಸುವಾರ್ತೆ ಬಂದದ್ದಕ್ಕಾಗಿ ನಾವು ಕರ್ತನಿಗೆ ಸ್ತುತಿಸ್ತೋತ್ರಗಳನ್ನು ಸಲ್ಲಿಸಬೇಕು. ಇಂದು ನಮ್ಮ ಮಾತೃಭಾಷೆಯಲ್ಲಿ ಸತ್ಯವೇದವನ್ನು ಓದುವಂಥ ಭಾಗ್ಯ ನಮಗೆ ದೊರೆತಿರುವದು. ನಮ್ಮ ಭಾರತದಲ್ಲಿ ಮಾತನಾಡುವ ಭಾಷೆಗಳ ಸಂಖ್ಯೆ 880. ಅವುಗಳಲ್ಲಿ ಸತ್ಯವೇದ ಪ್ರಪ್ರಥಮವಾಗಿ ಭಾಷಾಂತರಿಸಲ್ಪಟ್ಟದ್ದು. ತಮಿಳು ಭಾಷೆಯಲ್ಲಿ ಡೇನಿಶ್ ಮಿಶನರಿಯಾದ ಜೀಗನ್ ಬಾಲ್ಗ್ ಎಂಬಾತನು ಸತ್ಯವೇದವನ್ನು ಇಬ್ರಿಯ ಹಾಗೂ ಗ್ರೀಕ್ ಭಾಷೆಗಳಿಂದ ತಮಿಳು ಭಾಷೆಗೆ ಭಾಷಾಂತರಿಸಿದನು. 1865ನೇ ಇಸವಿಯಲ್ಲಿ ಕನ್ನಡ ಭಾಷೆಯಲ್ಲಿ ಸತ್ಯವೇದವು ಪ್ರಪ್ರಥಮವಾಗಿ ಮುದ್ರಿಸಲ್ಪಟ್ಟಿತು. 1934ನೇ ಇಸವಿಯಲ್ಲಿ 7 ಆವೃತ್ತಿಗಳಲ್ಲಿ ಕನ್ನಡ ಸತ್ಯವೇದ ಪ್ರಕಟವಾಗಿದೆ. ಹೊರದೇಶಗಳಿಂದ ಬಂದ ಮಿಶನರಿಗಳ ತ್ಯಾಗಪೂರಿತವಾದ ಸೇವೆಯಿಂದಾಗಿ ಇಂದು ನಮ್ಮ ನಮ್ಮ ಮಾತೃಭಾಷೆಗಳಲ್ಲಿ ಸತ್ಯವೇದವು ನಮ್ಮ ಕೈ ಸೇರಿದೆ.

ದೇವಮಕ್ಕಳೇ, ಅಪೊ. ಪೌಲನು ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ಕ್ರಿಸ್ತನ ಪ್ರೀತಿಯು "ನಮಗೆ ಒತ್ತಾಯ ಮಾಡುತ್ತದೆ" (2 ಕೊರಿಂ. 5:14) ಎಂದು ಬರೆಯುತ್ತಾನೆ. ಆ ಪ್ರೀತಿ ನಿಮ್ಮನ್ನೂ ಒತ್ತಾಯಪಡಿಸುವದಾದರೆ ನಮ್ಮ ದೇಶದಲ್ಲಿ ಸತ್ಯವೇದವು ಇನ್ನೂ ಮುದ್ರಿಸಲ್ಪಡದೇ ಇರುವ ಭಾಷೆಗಳಲ್ಲಿ ಮುದ್ರಿಸಲಾಗುವಂತೆ ಸಹಾಯ ಮಾಡಿರಿ.

*ನೆನಪಿಗೆ : ಯೆಹೋವನ ಮಾತುಗಳು ಯಥಾರ್ಥವಾದವುಗಳೇ; ಅವು ಏಳುಸಾರಿ ಪುಟಕ್ಕೆ ಹಾಕಿದ ಚೊಕ್ಕ ಬೆಳ್ಳಿಯೋಪಾದಿಯಲ್ಲಿವೆ (ಕೀರ್ತನೆ. 12:6).*



ಏಪ್ರಿಲ್ 21

## ಹೃದಯದಲ್ಲಿ ಬರೆಯಿರಿ!

ಬೆಳಿಗ್ಗೆ : 2 ಸಮು 12,13
ಸಂಜೆ : ಲೂಕ. 16

"ನಾನು ನಿಮಗೆ ತಿಳಿಸುವ ಮಾತುಗಳು ನಿಮ್ಮ ಹೃದಯದಲ್ಲಿರಬೇಕು" (ಧರ್ಮೋ.6:6).

ಸತ್ಯವೇದ ವಾಕ್ಯಗಳು ನಿಮ್ಮ ಹೃದಯವೆಂಬ ಹಲಿಗೆಯ ಮೇಲೆ ಬರೆಯಲ್ಪಡಬೇಕು. ನಿಮ್ಮ ಮನಸ್ಸಿನಲ್ಲಿ ಬರೆಯಲ್ಪಡಬೇಕು. ಸ್ಲೇಟುಗಳಲ್ಲಿ ಪುಸ್ತಕಗಳಲ್ಲಿ ಎಲೆಕ್ಟ್ರಾನಿಕ್ ನೋಟುಪುಸ್ತಕಗಳಲ್ಲಿ ಬರೆಯಲ್ಪಡುವ ಬರವಣಿಗೆಗಳು ಅಳಿಸಿಹೋಗುವವು. ಆದರೆ ಅಂತರ್ಯದಲ್ಲಿ ಬರೆಯಲ್ಪಟ್ಟ ದೇವರ ವಾಕ್ಯಗಳು ನಿರಂತರವಾಗಿರುವವು. ದೇವರ ವಾಕ್ಯಗಳು ಸದಾ ನಮ್ಮ ನೆನಪಿನಲ್ಲಿರುವಂತೆ ಅವುಗಳನ್ನು ಬಾಯಿಪಾಠ ಮಾಡಬೇಕು.

ಕರ್ತನ ವಾಕ್ಯಗಳು ನಮ್ಮ ಅಂತರ್ಯಗಳಲ್ಲಿ ನೆಲೆಗೊಳ್ಳುವಾಗ, ಆ ವಾಕ್ಯಗಳು ತಕ್ಕ ಸಮಯದಲ್ಲಿ ನಿಮಗೆ ಸಹಾಯ ಮಾಡುವದು, ಬಿಡುಗಡೆ ನೀಡುವದು. ಅರಸನಾದ ದಾವೀದನು ಹೀಗೆ ಹೇಳುವನು– "ನಿನಗೆ ವಿರೋಧವಾಗಿ ಪಾಪ ಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯಗಳಲ್ಲಿ ಇಟ್ಟುಕೊಂಡಿದ್ದೇನೆ" ಎಂದು (ಕೀರ್ತ. 119:11). ಅಪೊ. ಪೌಲನು "ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ. ಅದು ನಿನ್ನ ಬಾಯಲ್ಲಿಯೂ ನಿನ್ನ ಹೃದಯದಲ್ಲಿಯೂ ಇದೆ ಅನ್ನುತ್ತದೆ. ಆ ವಾಕ್ಯವು ನಾವು ಸಾರುವ ನಂಬಿಕೆಯ ವಿಷಯವಾದ ವಾಕ್ಯವೇ" (ರೋಮಾ.10:8) ಎಂದು ಹೇಳುತ್ತಾನೆ. ಪ್ರಿಯರೇ, ನಿಮ್ಮ ಕೈಯಲ್ಲಿ ಇರುವ ಸತ್ಯವೇದ ಪುಸ್ತಕವು ಇತರ ಪ್ರಾಪಂಚಿಕ ರೀತಿಯ ಪುಸ್ತಕಗಳಂತೆ ಮುದ್ರಿಸಲ್ಪಟ್ಟಿದ್ದರೂ ಈ ಲೋಕದ ಪುಸ್ತಕಗಳಿಗೆ ಇಲ್ಲದ ಶ್ರೇಷ್ಠತೆ ಅದಕ್ಕೆ ಇರುವದು. ಯಾಕೆಂದರೆ ಅದು ಆತ್ಮವೂ, ಜೀವವೂ, ಆಗಿರುವದು. ಅದು ಆತ್ಮೀಕ ಜೀವಿತವನ್ನು ಉಜ್ಜೀವನಗೊಳಿಸುವದು. ದೇವರ ಸಾರೂಪ್ಯದಂತೆ ನಿಮ್ಮನ್ನು ಮಾರ್ಪಡಿಸುವದು. ಆದ್ದರಿಂದ ಈ ದೇವ ವಾಕ್ಯಗಳು ನಿಮ್ಮ ಅಂತರ್ಯದಲ್ಲಿ ನೆಲೆಯಾಗಿ ನಿಲ್ಲಬೇಕು.

ದೇವಮಕ್ಕಳೇ, ಈ ದೇವವಾಕ್ಯಗಳನ್ನು ಪ್ರಸಂಗಿಸಿರಿ, ಸಾರಿರಿ. ನರಕದ ಕಡೆಗೆ ಸಾಗುತ್ತಿರುವ ಅನೇಕ ಆತ್ಮಗಳು ದೇವ ರಾಜ್ಯವನ್ನು ಪ್ರವೇಶಿಸಲು ಸಹಾಯವಾಗಿರುವದು. ಸೆರೆಮನೆಯಲ್ಲಿ ಬಂಧಿಸಲ್ಪಟ್ಟಿದ್ದ ಅಪೊಸ್ತಲರಿಗೆ ಕರ್ತನ ದೂತನು ಏನು ಹೇಳಿದನು ಗೊತ್ತೇ– "ನೀವು ಹೋಗಿ ದೇವಾಲಯದಲ್ಲಿ ನಿಂತುಕೊಂಡು ಈ ಸಜ್ಜೀವ ವಿಷಯವಾದ ಮಾತುಗಳನ್ನೆಲ್ಲಾ ಜನರಿಗೆ ಹೇಳಿರಿ" ಎಂಬದೇ (ಅ.ಕೃ. 5:20). ಕರ್ತನ ಬರೋಣ ಸಮೀಪವಾಗಿರುವ ಈ ದಿನಗಳಲ್ಲಿ ಅನುಕೂಲವಾದ ಕಾಲದಲ್ಲಿಯೂ, ಅನುಕೂಲವಿಲ್ಲದ ಕಾಲದಲ್ಲಿಯೂ ದೇವರ ವಾಕ್ಯ ಸಾರು. ಅದರಲ್ಲಿ ಆಸಕ್ತನಾಗಿರು (2 ತಿಮೊ. 4:2).

*ನೆನಪಿಗೆ : ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ, ಆ ಸುವಾರ್ತೆಯು ದೇವರ ಬಲ ಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ, ಆ ಮೇಲೆ ಗ್ರೀಕರಿಗೆ, ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದ್ದಾಗಿದೆ (ರೋಮಾ. 1:16).*

ಏಪ್ರಿಲ್ 22

## ಸತ್ಯವೇದವನ್ನು ಓದಿರಿ!

ಬೆಳಿಗ್ಗೆ : 2 ಸಮು 14,15
ಸಂಜೆ : ಲೂಕ. 17:1–19

"ನಿನಗೆ ವಿರೋಧವಾಗಿ ಪಾಪ ಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ" (ಕೀರ್ತನೆ. 119:11).

ನಿನ್ನೆಯ ವಾರ್ತಾಪತ್ರಿಕೆಯನ್ನು ಈ ದಿನ ಓದಿದರೆ ಅದು ಹಳೆಯ ಸಮಾಚಾರವಾಗುವದು. ಒಂದು ಕಥೆ ಪುಸ್ತಕವನ್ನು ಪುನಃ ಪುನಃ ಓದುವದಾದರೆ ಅದು ಸ್ವಾರಸ್ಯ ಕಳೆದುಕೊಂಡು ಬೇಸರ ತರಿಸುವದು. ಆದರೆ ಸತ್ಯವೇದ ಪುಸ್ತಕವೋ ದಿನ ದಿನವೂ ಹೊಸ ಹೊಸ ಪರಲೋಕ ರಹಸ್ಯಗಳನ್ನು ನಮಗೆ ಹೊತ್ತುತರುವದು.

ಯಾವಾಗಲೂ ಸತ್ಯವೇದದ ಒಂದು ಭಾಗವನ್ನು ನಿಮ್ಮ ಕರಗಳಲ್ಲಿ ಇಟ್ಟುಕೊಳ್ಳುವದು ಒಳ್ಳೆಯದು. ಸಮಯ ಸಿಕ್ಕಿದಾಗಲೆಲ್ಲಾ ಅದನ್ನು ಓದಬಹುದು. ಪ್ರಯಾಣಿಸುವಾಗ ಅದು ನಿಮ್ಮ ಜೊತೆಯಲ್ಲಿರಲಿ. ಅಪೊಸ್ತಲರ ಕೃತ್ಯಗಳು 8:26–28ರನ್ನು ಓದಿ ನೋಡಿರಿ : ಐಥಿಯೋಪ್ಯದ ಒಬ್ಬ ಮನುಷ್ಯನು ಯೆರೂಸಲೇಮಿಗೆ ಬಂದು ಹಿಂದಿರುಗುವಾಗ ಯೆಶಾಯನ ಪ್ರವಾದನಾ ಗ್ರಂಥವನ್ನು ಅವನು ಓದುತ್ತಿದ್ದನು. ಅನ್ಯಮತಸ್ಥನಾದ ಅವನಿಗೆ ಸತ್ಯವೇದದ ಮೇಲೆ ಎಷ್ಟು ಅಭಿಮಾನ ನೋಡಿರಿ! ಪ್ರಿಯರೇ, ಸತ್ಯವೇದವನ್ನು ಪ್ರತಿ ದಿನ ಬೆಳಿಗ್ಗೆ ಕಾಲು ಘಂಟೆಯಾದರೂ ಸಾವಧಾನವಾಗಿ ಓದಿರಿ. ಸತ್ಯವೇದವನ್ನು ನೀವು ಎಷ್ಟರ ಮಟ್ಟಿಗೆ ಕಾತರದಿಂದ, ದಾಹದಿಂದ ಓದುತ್ತೀರೋ ಅಷ್ಟರಮಟ್ಟಿಗೆ ನಿಮ್ಮೊಳಗೆ ಭಕ್ತಿ ವೃದ್ಧಿಯಾಗುವದು. ನೀವು ಜ್ಞಾನಿಗಳಾಗಿ ಪ್ರಕಾಶಿಸುವಿರಿ. ದೇವರ ವಾಕ್ಯಗಳೆಲ್ಲಾ ಪವಿತ್ರಾತ್ಮನಿಂದ ಅನುಗ್ರಹಿಸಲ್ಪಟ್ಟಿರುವದು. ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ, ಖಂಡನೆಗೂ, ತಿದ್ದುಪಾಟಿಗೂ, ನೀತಿ ಶಿಕ್ಷೆಗೂ, ಉಪಯುಕ್ತವಾಗಿದೆ. ಅದರಿಂದ ದೇವಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು" ಎಂದು ಅಪೊ. ಪೌಲನು ತನ್ನ ಆತ್ಮೀಕ ಮಗನಾದ ತಿಮೊಥೆಯನಿಗೆ ಬರೆಯುತ್ತಾನೆ (2 ತಿಮೊ. 3:16,17). ಒಬ್ಬ ಆಫ್ರಿಕಾದೇಶದ ನಾಯಕನು ಇಂಗ್ಲೆಂಡಿನ ರಾಣಿಯಾದ ವಿಕ್ಟೋರಿಯಾ ಮಹಾರಾಣಿಯನ್ನು ನಿಮ್ಮ ಸಾಮ್ರಾಜ್ಯವು ಎಲ್ಲಾ ದಿಕ್ಕುಗಳಲ್ಲಿ ವಿಸ್ತರಿಸಿರುವದರ ರಹಸ್ಯವೇನೆಂದು ಕೇಳಿದಾಗ ರಾಣಿ ಕೂಡಲೇ ತನ್ನ ಕೈಗಳಲ್ಲಿದ್ದ ಸತ್ಯವೇದವನ್ನು ಎತ್ತಿ ಹಿಡಿದು ಈ ಪುಸ್ತಕದಲ್ಲಿರುವ ದೇವರ ವಾಕ್ಯಗಳೇ ನಮ್ಮ ಶ್ರೇಷ್ಠತೆಗೆ ಕಾರಣ ಎಂದು ಹೇಳಿದಳಂತೆ.

ದೇವಮಕ್ಕಳೇ, ಸತ್ಯವೇದವನ್ನು ಅದರಲ್ಲಿರುವ ವಾಕ್ಯಗಳನ್ನು ಒಂದು ನಿಧಿಯಂತೆ ಕಾಪಾಡಿಕೊಳ್ಳಿರಿ. ಅದು ನಿಮ್ಮ ಕಾಲಿನ ದೀಪವೂ, ದಾರಿಗೆ ಬೆಳಕೂ ಆಗಿರಲಿ.

*ನೆನಪಿಗೆ : ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ; ದಿನವೆಲ್ಲಾ ಅದೇ ನನ್ನ ಧ್ಯಾನ" (ಕೀರ್ತನೆ 119:97).*



ಏಪ್ರಿಲ್ 23

## ದೇವರಾತ್ಮನಿಂದ!

ಬೆಳಿಗ್ಗೆ : 2 ಸಮು 16,17,18
ಸಂಜೆ : ಲೂಕ. 17:20–37

"ಸತ್ಯವೇದ ವಾಕ್ಯಗಳೆಲ್ಲಾ ದೈವಪ್ರೇರಿತವಾದದ್ದು! (2 ತಿಮೊ. 3:16).

ಸತ್ಯವೇದ ಪುಸ್ತಕವು ಅತ್ಯಮೂಲ್ಯವಾದ ಒಂದು ಬೊಕ್ಕಸವಾಗಿರುವದು. ಹಳೆಯ ಹಾಗೂ ಹೊಸ ಒಡಂಬಡಿಕೆಯ ಭಕ್ತರನ್ನು ನಮ್ಮ ಕಣ್ಣ ಮುಂದೆ ಅದು ತಂದು ನಿಲ್ಲಿಸುವದು. ಅಲ್ಲಿ ನಮ್ಮ ಮೂಲ ಪಿತೃಗಳ ಕುರಿತಾಗಿ ಓದುತ್ತೇವೆ. ಅವರ ಜೀವಿತದ ಮಾದರಿಯ ಮೂಲಕ ಆಶೀರ್ವಾದಗಳನ್ನು ಪಡೆಯುತ್ತೇವೆ. ಹಾಗೂ ಹಿಂಜಾರಿಹೋದ ಭಕ್ತರ ಜೀವಿತದ ಮೂಲಕ ಎಚ್ಚರಿಸಲ್ಪಡುತ್ತೇವೆ.

ದೇವರೊಂದಿಗೆ ನಡೆದ ಹನೋಕನನ್ನು ನೋಡುವಾಗೆಲ್ಲಾ ದೇವರೊಂದಿಗೆ ನಾವೂ ನಡೆಯಲು ಸಾಧ್ಯ ಎಂಬ ಯೋಚನೆ ಉಂಟಾಗುವದು. ಅಬ್ರಹಾಮನ ನಂಬಿಕೆಯನ್ನು ನೋಡುವಾಗ ಆಶ್ಚರ್ಯಗೊಳ್ಳುತ್ತೇವೆ. ಕರ್ತನು ಅವನನ್ನು 'ಹೊರಟು ಬಾ' ಎಂದು ಕರೆದಾಗ, ಎಷ್ಟು ದೃಢವಾಗಿ ತನ್ನ ತಂದೆಯ ಮನೆಯನ್ನು ಬಿಟ್ಟು ಹೊರಟು ಕರ್ತನು ತೋರಿಸಿದ ದೇಶಕ್ಕೆ ಹೋದನು. ಅಬ್ರಹಾಮನ ನಂಬಿಕೆಯ ಕಾರ್ಯಗಳು ನಮ್ಮ ನಂಬಿಕೆಯನ್ನು ಬಡಿದೆಬ್ಬಿಸುವದು. ಅಬ್ರಹಾಮನು ಒಬ್ಬ ಒಳ್ಳೆಯ ವಿಶ್ವಾಸವೀರನಾಗಿರುವನು. ಆತನೇ ನಮ್ಮ ಮೂಲಪಿತೃವಾಗಿರುವನು. ಇಸ್ರಾಯೇಲ್ಯರನ್ನು ನಾಲ್ವತ್ತು ವರುಷಗಳು ಅರಣ್ಯದಲ್ಲಿ ನಡೆಸಿಕೊಂಡು ಬಂದ ಮೋಶೆಯನ್ನು ಹಳೆ ಒಡಂಬಡಿಕೆಯಲ್ಲಿ ಸಂಧಿಸುವೆವು. ಆತನು ಕರ್ತನ ಮೇಲೆ ಇಟ್ಟ ಪ್ರೀತಿ ಆತನ ತಾಳ್ಮೆ ಆತನ ತ್ಯಾಗ, ನಮ್ಮನ್ನು ಅಧಿಕವಾಗಿ ಆಕರ್ಶಿಸುವದು. ಕರ್ತನನ್ನು ಸ್ತುತಿಸಿ ಆರಾಧಿಸಿದ ದಾವೀದನನ್ನು ಸಂಧಿಸುತ್ತೇವೆ. ಅವನು ಬರೆದ ಕೀರ್ತನೆಗಳು ನಮ್ಮ ಆತ್ಮೀಕ ಜೀವಿತವನ್ನು ಉತ್ಸಾಹಗೊಳಿಸುವಂಥವುಗಳಾಗಿವೆ. ಅದೇ ವೇಳೆಯಲ್ಲಿ ಜ್ಞಾನಿಯಾದ ಸೊಲೊಮೋನನು ಬರೆದ ಜ್ಞಾನೋಕ್ತಿಗಳು ಅಮೂಲ್ಯವಾದ ಬೊಕ್ಕಸವಾಗಿದೆ. ಸಿಂಹದ ಗವಿಯಲ್ಲಿ ಹಾಕಲ್ಪಟ್ಟ ದಾನಿಯೇಲನ ಭಕ್ತಿ ವೈರಾಗ್ಯಭರಿತ ಜೀವಿತ ನಮಗೆ ಎಷ್ಟು ದೊಡ್ಡ ಸವಾಲು.

ದೇವಜನರೇ, ಸತ್ಯವೇದವನ್ನು ಪುನಃ ಪುನಃ ಓದಿ ನೋಡಿರಿ. ಇದು ಎಷ್ಟೋ ವರುಷಗಳ ಹಿಂದೆ ಬರೆಯಲ್ಪಟ್ಟಿದ್ದರೂ, ಇಂದಿಗೂ, ಹೊಸದಾಗಿಯೂ, ಮಹಿಮೆಯುಳ್ಳದ್ದಾಗಿಯೂ, ಕೃಪೆಯಿಂದ ಕೂಡಿದ್ದಾಗಿಯೂ ಇರುವದು. ಎಷ್ಟೋ ವರುಷಗಳ ಹಿಂದೆ ಬರೆಯಲ್ಪಟ್ಟ ಪತ್ರಿಕೆಗಳು ಇಂದಿಗೂ ನಮ್ಮ ಜೀವಿತಕ್ಕೆ ತಕ್ಕದ್ದಾಗಿಯೂ, ಆಶೀರ್ವಾದಕರವಾಗಿಯೂ ಇರುವದಲ್ಲವೇ? ಪ್ರಿಯರೇ, ಸತ್ಯವೇದವನ್ನು ನಿಮಗೆ ಸ್ವಂತವಾಗಿಸಿಕೊಳ್ಳಿರಿ. ಆತ್ಮೀಕ ಜೀವಿತದಲ್ಲಿ ಬೆಳೆಯಿರಿ.

*ನೆನಪಿಗೆ : "ಯಾವ ಪ್ರವಾದನೆಯೂ, ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ, ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು (2 ಪೇತ್ರ. 1:21).*

ಏಪ್ರಿಲ್ 24

## ಧ್ಯಾನಿಸಿರಿ!

ಬೆಳಿಗ್ಗೆ : 2 ಸಮು 19,20
ಸಂಜೆ : ಲೂಕ. 18:1–30

“ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ, ಅವನು ಎಷ್ಟೋ ಧನ್ಯನು” (ಕೀರ್ತ. 1:2).

ಸತ್ಯವೇದವನ್ನು ಧ್ಯಾನಿಸುತ್ತಾ, ಧ್ಯಾನಿಸುತ್ತಾ, ಅದು ಭಾಗ್ಯಕರವಾದ ಆಶೀರ್ವಾದವನ್ನು ತರುವದು. ಸತ್ಯವೇದದಲ್ಲಿ ಹಗಲಿರುಳು ಧ್ಯಾನಾಸಕ್ತನಾಗಿದ್ದ ದಾವೀದನು ಎಷ್ಟೋ ಭಾಗ್ಯವಂತನಾಗಿ ಉನ್ನತಿ ಹೊಂದಿದನು ನೋಡಿರಿ. ನೀವು ಸತ್ಯವೇದವನ್ನು ಓದುವದರೊಂದಿಗೆ ನಿಂತುಬಿಡಬಾರದು, ಅದನ್ನು ಧ್ಯಾನಿಸಿರಿ. ಇಸಾಕನು ಒಬ್ಬ ಧ್ಯಾನ ಪುರುಷನಾಗಿದ್ದನು. ಸಂಜೆಯ ವೇಳೆಗಳಲ್ಲಿ ಏಕಾಂತ ಸ್ಥಳಕ್ಕೆ ಹೋಗಿ ಕರ್ತನನ್ನು ಕುರಿತು ಧ್ಯಾನಿಸುವದು ಅವನ ಅಭ್ಯಾಸವಾಗಿತ್ತು. ಇದರಿಂದಾಗಿ ಮೂಲಪಿತೃಗಳ ಸಾಲಿನಲ್ಲಿ ಒಂದು ಸ್ಥಾನವನ್ನು ಪಡೆದುಕೊಂಡನು.

ಧ್ಯಾನವೆಂದರೆ ಏನು? ಹಸು ಬಹಳ ವೇಗವಾಗಿ ಹುಲ್ಲು ಮೇಯುವದು, ನಂತರ ಒಂದು ಸ್ಥಳಕ್ಕೆ ಹೋಗಿ ಮಲಗಿ ಅಲ್ಲಿಯವರೆಗೂ ತಾನು ತಿಂದ ಆಹಾರವನ್ನು ಬಾಯಿಗೆ ತಂದು ಮೆಲಕು ಹಾಕುವದು. ಆ ರೀತಿಯಾಗಿ ಮೆಲುಕು ಹಾಕುವದು ತಿಂದ ಆಹಾರ ಜೀರ್ಣವಾಗಲು ಸಹಾಯವಾಗುವದು. ಅದೇ ರೀತಿ, ಓದಿದ ಸತ್ಯವೇದ ವಾಕ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಚಿಂತನೆ ಮಾಡುವದೇ ಧ್ಯಾನ. ಪ್ರಿಯರೇ, ನೀವು ಸತ್ಯವೇದವನ್ನು ಓದುವಾಗ ಕರ್ತನ ಮಹತ್ವಗಳನ್ನು ಮಹಿಮೆಯನ್ನು ಅರಿಯುವಿರಿ. ಬಾಧ್ಯವಾಗಿಸಿಕೊಳ್ಳಬೇಕಾದ ವಾಗ್ದಾನ ವಚನಗಳನ್ನು ನಿಮ್ಮದಾಗಿಸಿಕೊಳ್ಳಿರಿ. ಕರ್ತನು ಯೆಹೋಶುವನನ್ನು ನೋಡಿ, “ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ, ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ” (ಯೆಹೋ. 1:8) ಅಂದನು.

ದೇವಮಕ್ಕಳೇ, ದೇವರ ವಾಕ್ಯಗಳು ಸುಲಭವಾಗಿ ಎಟಕುವ ಸೋರೆಕಾಯಿ ಅಲ್ಲ, ತತ್ವಜ್ಞಾನದ ಸರಕಲ್ಲ, ಅದು ಆತ್ಮವೂ, ಜೀವವೂ ಆಗಿರುವದು. ತಿಳೀ ಜೇನಿಗಿಂತಲೂ ಮಧುರವಾದದ್ದು. ಆದ್ದರಿಂದ ಸತ್ಯವೇದದಲ್ಲಿರುವ ಒಂದೊಂದು ವಾಗ್ದಾನಗಳನ್ನೂ ಸ್ವಂತವಾಗಿಸಿಕೊಳ್ಳಿರಿ. ನೀವು ಸತ್ಯವೇದಕ್ಕೆ ಮೊದಲ ಸ್ಥಾನ ನೀಡಿ ಅದನ್ನು ಘನಪಡಿಸುವಿರಾ?

*ನೆನಪಿಗೆ : “ನಿನ್ನ ನುಡಿಗಳು ನನ್ನ ನಾಲಿಗೆಗೆ ಎಷ್ಟೋ ರುಚಿಯಾಗಿವೆ. ಅವು ನನ್ನ ಬಾಯಿಗೆ ಜೇನುತುಪ್ಪಕ್ಕಿಂತಲೂ ಸಿಹಿಯಾಗಿವೆ: (ಕೀರ್ತ. 119:103).*



ಏಪ್ರಿಲ್ 25

## ನಿತ್ಯಜೀವ ಉಂಟು!

ಬೆಳಿಗ್ಗೆ : 2 ಸಮು 21,22
ಸಂಜೆ : ಲೂಕ. 18:31–43

“ಶಾಸ್ತ್ರಗಳಿಂದ ನಿತ್ಯಜೀವವು ದೊರೆಯುತ್ತದೆಂದು ನೀವು ನೆನಸಿ ಅವುಗಳನ್ನು ವಿಚಾರಿಸುತ್ತೀರಲ್ಲಾ; ಅವುಗಳೂ ನನ್ನ ವಿಷಯದಲ್ಲಿ ಸಾಕ್ಷಿಕೊಡುವವುಗಳಾಗಿವೆ” (ಯೋಹಾನ.5:39).

ಆತ್ಮವೂ, ಜೀವವೂ ಆಗಿರುವ ವೇದ ವಾಕ್ಯವು ನಿಮ್ಮೊಳಗೆ ನಿತ್ಯಜೀವವನ್ನು ತರುವದು. ನೀವು ಎಷ್ಟರ ಮಟ್ಟಿಗೆ ಸತ್ಯವೇದವನ್ನು ಓದಿ ಧ್ಯಾನಿಸುವಿರೋ, ಅಷ್ಟರ ಮಟ್ಟಿಗೆ ಆತ್ಮದಲ್ಲಿ ಬಲವನ್ನೂ, ಪೂರ್ಣತೆಯನ್ನೂ ಪಡೆದುಕೊಳ್ಳುವಿರಿ. ಸತ್ಯವೇದವನ್ನು ಪ್ರೀತಿಸಲು ಕಲಿತುಕೊಂಡ ಎಜ್ರ, ದಾನಿಯೇಲ, ತಿಮೊಥಿ ಎಂಬುವರೆಲ್ಲಾ ದೈವೀಕ ಜ್ಞಾನದಲ್ಲಿ ಎಷ್ಟೋ ಪೂರ್ಣತೆಯುಳ್ಳವರಾಗಿದ್ದರು! ಎಷ್ಟೋ ವಿರೋಧಗಳ ಮಧ್ಯದಲ್ಲಿ ಅವರು ಜೀವಿಸಿದ್ದಾಗ್ಯೂ. ಜಯಶಾಲಿಗಳಾಗಿ ನಿಂತರು!

ಸತ್ಯವೇದ ವಾಕ್ಯಗಳು ನಿಮ್ಮ ಹೃದಯಗಳಲ್ಲಿ ಇರುವದಾದರೆ, ನೀವು ಪಾಪವನ್ನು ಜಯಿಸುವಿರಿ. ದಾವೀದನು “ನಿನಗೆ ವಿರೋಧವಾಗಿ ಪಾಪ ಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ” (ಕೀರ್ತ. 119:11). “ಅವುಗಳ ಮೂಲಕ ನಿನ್ನ ದಾಸನಿಗೆ ಎಚ್ಚರಿಕೆಯಾಗುತ್ತದೆ. ಅವುಗಳನ್ನು ಕೈಕೊಳ್ಳುವದರಿಂದ ಬಹಳ ಫಲ ಉಂಟಾಗುತ್ತದೆ! (ಕೀರ್ತ.19:11) ಎಂದು ಹೇಳುತ್ತಾನೆ. ದೇವರ ವಾಕ್ಯಗಳಿಗೆ ಕಿವಿಗೊಡದೆ ಅದನ್ನು ತಿರಸ್ಕರಿಸುವವರ ಸ್ಥಿತಿ ಪರಿತಾಪಕರವಾಗಿರುವದು. ಈ ಕುರಿತು ಅಪೊ. ಯೋಹಾನನು ಬರೆದ ಸುವಾರ್ತೆಯಲ್ಲಿ ಕರ್ತನು “ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪು ಮಾಡುವಂಥದು ಒಂದು ಇದೆ. ಅದು ಯಾವದೆಂದರೆ, ನಾನು ಆಡಿದ ಮಾತು! (ಯೋಹಾ.12:48) ಎಂದು ಹೇಳುತ್ತಾನೆ. ಸತ್ಯವೇದವು ಒಂದೇ ಆದರೆ ಅದನ್ನು ಓದುವವರು ಅನೇಕರು. ಯೇಸುಕ್ರಿಸ್ತನು ಬೋಧಿಸಿದಾಗ ಕೆಲವರು ಆಸಕ್ತಿಯಿಂದ ಆತನನ್ನು ಹಿಂಬಾಲಿಸಿದರು. ಕೆಲವರು ಆತನು ಮಾಡಿದ ಅದ್ಭುತಗಳನ್ನು ನೋಡಿ ದೇವರನ್ನು ಸ್ತುತಿಸಿ ಆನಂದಿಸಿದರು. ಆದರೆ ಇತರ ಗುಂಪಿನವರು ಆತನನ್ನು ತಿರಸ್ಕರಿಸಿ ಆತನನ್ನು ಕೊಲ್ಲುವ ಮಾರ್ಗವನ್ನು ಹುಡುಕಿದರು.

ದೇವಮಕ್ಕಳೇ, ಕ್ರಿಸ್ತನ ವಾಕ್ಯ ಒಂದೇ. ಅದು ನಿಮ್ಮ ಬಳಿಗೆ ಬರುವಾಗ, ನೀವು ಯಾವ ರೀತಿ ವರ್ತಿಸುವಿರಿ ಎಂಬುದೇ ಪ್ರಶ್ನೆ. ಆಸಕ್ತಿಯಿಂದ ಅಂಗೀಕರಿಸುವಿರಾ? ಇಲ್ಲವೇ ವಿತಂಡವಾದ ಮಾಡಿ ಅಲಕ್ಷಿಸುವಿರಾ?

*ನೆನಪಿಗೆ : “ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ” (1 ಯೋಹಾ. 5:13).*

## ಏಪ್ರಿಲ್ 26 — ಹೇಗೆ ಓದಬೇಕು?

ಬೆಳಿಗ್ಗೆ : 2 ಸಮು 23,24
ಸಂಜೆ : ಲೂಕ. 19:1–27

"ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ. ದಿನವೆಲ್ಲಾ ಅದೇ ನನ್ನ ಧ್ಯಾನ" (ಕೀರ್ತನೆ 119:97).

ವಿಧವಿಧವಾದ ಹೂಗಳಿರುವ ಒಂದು ಹೂದೋಟಕ್ಕೆ ಹೋಗುವಿರೆಂದು ಇಟ್ಟುಕೊಳ್ಳಿರಿ. ಮೊದಲನೆಯದಾಗಿ ನೀವು ಅಲ್ಲಿ ಹಾರಾಡುವ ಬಣ್ಣದ ಚಿಟ್ಟೆಯನ್ನು ನೋಡುವಿರಿ. ಅದು ಅರಳಿದ ಒಂದು ಹೂವಿನ ಮೇಲೆ ಕುಳಿತುಕೊಳ್ಳುವದು. ಒಂದೆರಡು ಕ್ಷಣಗಳಲ್ಲಿ ಅಲ್ಲಿಂದ ಮತ್ತೊಂದು ಹೂವಿಗೆ ಹಾರುವದು. ಅದು ಅಲ್ಲಿರುವ ಹಲವು ಹೂವುಗಳ ಮೇಲೆ ಕುಳಿತರೂ ಹೂವಿನ ಮಕರಂದದಿಂದಲೋ, ಅಥವಾ ಅದರೊಳಗಿರುವ ಜೇನಿನಿಂದಲೋ ಅಧಿಕವಾಗಿ ಬಲಗೊಳ್ಳುವದಿಲ್ಲ.

ಎರಡನೆಯದಾಗಿ ಒಬ್ಬ ಹುಡುಗಿ ಬರುವಳು. ಹೂವಿನ ವಾಸನೆಯನ್ನು ನೋಡಿ ಅದನ್ನು ಕಿತ್ತು ತನ್ನ ಮುಡಿಗೇರಿಸುವಳು. ನಂತರ ಆ ಹೂವಿನ ಬಗ್ಗೆ ಅವಳಿಗೆ ಚಿಂತೆ ಇಲ್ಲದೆ ಹೋಗಿಬಿಡುವಳು. ಮೂರನೆಯದಾಗಿ, ಅಲ್ಲಿ ಒಂದು ಜೇನ್ನೊಣ ಹಾರಿಬರುವದು. ಅದು ಹೂವಿನ ಮೇಲೆ ಕುಳಿತು ಅದರ ಮೇಲಿರುವ ಮಕರಂದವನ್ನು ತನ್ನ ಕಾಲುಗಳಲ್ಲಿ ಶೇಖರಿಸಿಕೊಳ್ಳುವದು. ಮಾತ್ರವಲ್ಲ, ಹೂವಿನೊಳಗೆ ಇರುವ ರಸವನ್ನು ಹೀರುವದು. ತನಗೆ ಮಾತ್ರವಲ್ಲ, ತನ್ನ ಬಂಧುಗಳಿಗೂ ತೆಗೆದುಕೊಂಡು ತನ್ನ ಗೂಡಿಗೆ ಹಾರಿಹೋಗುವದು. ಪ್ರಿಯರೇ, ನೀವು ಬಣ್ಣದ ಚಿಟ್ಟೆಯಾ? ಜೇನ್ನೊಣವಾ? ಸ್ವಲ್ಪ ಚಿಂತಿಸಿ ನೋಡಿರಿ. ಒಮ್ಮೆ ಭಕ್ತನಾದ ಮಾರ್ಟಿನ್ ಲೂಥರ್ ಹೀಗೆ ಹೇಳಿದರು– "ಸತ್ಯವೇದವನ್ನು ಕೈಯಲ್ಲಿ ತೆಗೆದುಕೊಳ್ಳವಾಗೆಲ್ಲಾ ಅದನ್ನು ಒಂದು ಸೇಬು ಮರದಂತೆ ಭಾವಿಸುವೆನು. ಅದರ ಬುಡವನ್ನು ಹಿಡಿದು ಪೂರ್ಣಬಲದಿಂದ ಅಲ್ಲಾಡಿಸುವಾಗ ಚೆನ್ನಾಗಿ ಕಳಿತ ಹಣ್ಣುಗಳು ಕೆಳಗೆ ಬೀಳುವವು. ಮಾಗಿದ ಹಣ್ಣನ್ನು ತಿಂದು ಆನಂದಿಸುವೆನು. ನಂತರ ಒಂದೊಂದು ಕೊಂಬೆಗಳನ್ನೂ ಹಿಡಿದು ಅಲ್ಲಾಡಿಸುವದುಂಟು. ಅದರಂತೆಯೇ ನಾನು ಸತ್ಯವೇದವನ್ನು ಪೂರ್ತಿಯಾಗಿ ಓದಿ ಮುಗಿಸುವೆನು. ಅನಂತರ ಒಂದೊಂದೇ ದೇವರ ವಾಕ್ಯವೆಂಬ ಸೇಬಿನ ಹಣ್ಣನ್ನು ರುಚಿಸಲಾರಂಭಿಸುವೆನು. ಅದು ನನ್ನ ಆತ್ಮೀಕ ಜೀವಿತಕ್ಕೆ ಬಹಳ ಪ್ರಯೋಜನಕಾರಿಯಾಗಿದೆ ಎಂದು".

ದೇವಜನರೇ, ದೇವರ ವಾಕ್ಯವನ್ನು ಆಸಕ್ತಿಯಿಂದ ಓದಿ ಧ್ಯಾನಿಸಿರಿ. ಸತ್ಯವೇದವನ್ನು ಪ್ರತಿದಿನ ಹೊತ್ತಾರೆಯಲ್ಲಿ ಓದುವದನ್ನು ಧ್ಯಾನಿಸುವದನ್ನು ಅಭ್ಯಾಸ ಮಾಡಿರಿ. ಕರ್ತನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ (ಕೀರ್ತ. 34:8).

*ನೆನಪಿಗೆ : "ಕರ್ತನ ಮಾತೋ, ಸದಾಕಾಲವೂ ಇರುವದು ಎಂದು ಹೇಳಿದೆಯಷ್ಟೆ. ಆ ಮಾತು ಯಾವದೆಂದರೆ ನಿಮಗೆ ಸಾರಲ್ಪಟ್ಟ ಸುವಾರ್ತಾ ವಾಕ್ಯವೇ" (1 ಪೇತ್ರ 1:25).*



## ಏಪ್ರಿಲ್ 27 — ಸತ್ಯವೇದವೂ, ದಿನಚರಿಯೂ!

ಬೆಳಿಗ್ಗೆ : 1 ಅರಸು 1,2
ಸಂಜೆ : ಲೂಕ. 19:28–48

"ನಿನ್ನ ಧರ್ಮಶಾಸ್ತ್ರವನ್ನು ಅನುಸರಿಸದವರ ನಿಮಿತ್ತ ನನಗೆ ಕಣ್ಣೀರು ಪ್ರವಾಹವಾಗಿ ಹರಿಯುತ್ತದೆ" (ಕೀರ್ತನೆ 119:136).

ವರ್ಷದ ಪ್ರಾರಂಭದಲ್ಲಿ ಅನೇಕರು ದಿನಚರಿ(Diary)ಯನ್ನು ಬರೆಯಲು ತೊಡಗುವರು. ಸತ್ಯವೇದವು ನಮ್ಮ ಕುರಿತು ತನ್ನ ದಿನಚರಿ ಪುಸ್ತಕದಲ್ಲಿ ಬರೆಯಲಾರಂಭಿಸಿದರೆ, ಅದು ಹೇಗಿರುವದು? ಎಂಬುದನ್ನು ಸ್ವಲ್ಪ ಯೋಚಿಸಿ ನೋಡೋಣವೇ? ಇದೋ, ಒಂದು ಕಲ್ಪನೆಯ ದಿನಚರಿ ಬರಹ!

ಜನವರಿ 10 : ಇಂದು ಒಬ್ಬ ನೂತನ ದಂಪತಿಗಳಿಗೆ ನಾನು ಉಡುಗೊರೆಯಾಗಿ ಕೊಡಲ್ಪಟ್ಟೆನು. ಅನೇಕ ಉಡುಗೊರೆ ವಸ್ತುಗಳು ಅವರಿಗೆ ದೊರಕಿದವು. ಅವುಗಳಿಗೆ ಸಿಕ್ಕ ಬೆಲೆ ನನಗೆ ಸಿಗಲಿಲ್ಲ. ಬಹಳವಾದ ಅಲಕ್ಷ್ಯಭಾವದಿಂದ ಸತ್ಯವೇದವಾ? ಎಂದು ಹೇಳಿ ಒಂದು ಕಡೆ ಇಟ್ಟುಬಿಟ್ಟರು.

ಜನವರಿ 16: ಇಂದು ಭಾನುವಾರ, ನೂತನ ದಂಪತಿಗಳು ದೇವಾಲಯಕ್ಕೆ ಹೊರಟರು. ಆಗಲೇ ಅವರಿಗೆ ಹೊಸ ಸತ್ಯವೇದವನ್ನು ಕೈಯಲ್ಲಿ ತೆಗೆದುಕೊಂಡು ಹೋಗಬೇಕೆಂಬ ಯೋಚನೆ ಅವರಿಗೆ ಬಂತು. ಆದ್ದರಿಂದ ನನ್ನ ನೆನಪು ಬಂದು ಅವರ ಕೈಸೇರಿ ದೇವಾಲಯಕ್ಕೆ ಕೊಂಡೊಯ್ದನು. ನನ್ನನ್ನು ತೆರೆಯದೆ, ಹಾಗೆಯೇ ಮನೆಗೆ ತೆಗೆದುಕೊಂಡು ಬಂದರು.

ಜನವರಿ 27: ಮದುವೆಯ ನಂತರ ಗಂಡನು ಕಛೇರಿಗೆ ಹೊರಡುವ ಮೊದಲು ಶೀಘ್ರವಾಗಿ ಸತ್ಯವೇದವನ್ನು ತೆರೆದು ಕೀರ್ತನೆ 1 ಅನ್ನು ಓದಿ ಮುಚ್ಚಿಬಿಟ್ಟು ಹೋಗಿಬಿಟ್ಟನು.

ಏಪ್ರಿಲ್ 21 : ಅಂದು ಅವರು ಹೊಸದಾಗಿ ಪ್ರಾರಂಭಿಸುವ ವ್ಯಾಪಾರವನ್ನು ಆಶೀರ್ವದಿಸಿ, ಪ್ರಾರ್ಥಿಸುವಂತೆ ಬೋಧಕರು ಬಂದರು. ಅವರು ಧರ್ಮೋಪದೇಶಕಾಂಡ 28ನೇ ಅಧ್ಯಾಯವನ್ನು ತೆಗೆದು ಅದರಲ್ಲಿ ಬರುವ ಆಶೀರ್ವಾದಗಳನ್ನೆಲ್ಲಾ ಓದಿದರು. ನೀನು ಮಾಡುವ ಎಲ್ಲಾ ಕೆಲಸಗಳಲ್ಲಿ ನಿನಗೆ ಆಶೀರ್ವಾದ ಕೊಡುವನು. "ನಿನ್ನ ದೇವರಾದ ಕರ್ತನು ನಿನಗೆ ಕೊಟ್ಟ ದೇಶದಲ್ಲಿ ನಿನ್ನನ್ನು ಆಶೀರ್ವದಿಸುವನು" ಎಂಬ ವಾಕ್ಯ ಓದಿದಾಗ ಎಲ್ಲರಿಗೂ ಬಹಳ ಸಂತೋಷವಾಯಿತು. ನಂತರ ಮುಚ್ಚಿ ಇಟ್ಟುಬಿಟ್ಟರು.

ಡಿಸೆಂಬರ್ 15 : ಕ್ರಿಸ್‌ಮಸ್‌ಗಾಗಿ ಮನೆಗೆ ಸುಣ್ಣ ಬಳಿಯುತ್ತಿದ್ದರು. ನನ್ನನ್ನು ಕೊಳೆ ಬಟ್ಟೆಯ ಬುಟ್ಟಿಯಲ್ಲಿ ಹಾಕಿ ಮನೆಯ ಹಿಂಬಾಗದಲ್ಲಿ ಇಟ್ಟುಬಿಟ್ಟರು. ಕೆಲಸ ಮುಗಿಯುವವರೆಗೆ ಕೊಳೆ ಬಟ್ಟೆಗಳೊಂದಿಗೆ ಇರಬೇಕಾಯಿತು.

ಕೊನೆಯ ಮಾತು : ಸ್ವಾರ್ಥಕ್ಕಾಗಿ ನನ್ನನ್ನು ಉಪಯೋಗಿಸಿ, ಬೇರೆ ಸಮಯಗಳಲ್ಲಿ ನನ್ನನ್ನು ತಿರಸ್ಕರಿಸುವವರು ನನ್ನ ವಾಕ್ಯದಿಂದಲೇ ನ್ಯಾಯ ತೀರಿಸಲ್ಪಡುವರು.

ದೇವಜನರೇ, ಇದು ಒಂದು ಕಲ್ಪನೆಯ ದಿನಚರಿಯೇ, ಆದಾಗ್ಯೂ ಸ್ವಲ್ಪ ಚಿಂತಿಸಿ ನೋಡಿರಿ. ಸತ್ಯವೇದ ನಿಮ್ಮನ್ನು ಗಮನಿಸುವದು.

*ನೆನಪಿಗೆ : ಇರುಳಿನ ಒಂದೊಂದು ಜಾವವನ್ನು ಮುಂಗೊಂಡು ನಿನ್ನ ನುಡಿಯನ್ನು ಧ್ಯಾನಿಸುತ್ತೇನೆ (ಕೀರ್ತನೆ. 119:148).*

ಏಪ್ರಿಲ್ 28

## ಅನುಸರಿಸಿದರೆ...!

ಬೆಳಿಗ್ಗೆ : 1 ಅರಸು 3,4,5
ಸಂಜೆ : ಲೂಕ. 20:1–19

ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ... ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತ ಸ್ಥಿತಿಗೆ ತರುವನು (ಧರ್ಮೋ. 28:1).

ಧರ್ಮೋಪದೇಶಕಾಂಡದ 28ನೇ ಅಧ್ಯಾಯದ 1 ರಿಂದ 14 ವಚನಗಳನ್ನು ಓದಿ ದೇವಸೇವಕರು ಆಶೀರ್ವದಿಸುವದುಂಟು. ದೇವರ ವಾಕ್ಯಗಳನ್ನು ಕೈಕೊಂಡು ದೇವರ ವಾಕ್ಯಗಳಿಗೆ ಕಿವಿಗೊಡುವಾಗ ಯಾವ ಯಾವ ಆಶೀರ್ವಾದಗಳು ಫಲಿಸುವವು ಎಂಬುದು ಅಲ್ಲಿ ಬರೆಯಲ್ಪಟ್ಟಿರುವದು.

ಕರ್ತನು ವಿಧಿಸುವ ಆಜ್ಞೆಗಳೆಲ್ಲವನ್ನೂ ಕೈಗೊಳ್ಳುವವನಾದರೆ ಅವನು ಪಟ್ಟಣದಲ್ಲೂ ಆಶೀರ್ವದಿಸಲ್ಪಡುವನು, ಹೊರಗೂ ಆಶೀರ್ವದಿಸಲ್ಪಡುವನು. ಅವನ ಗರ್ಭದ ಫಲವೂ ಅವನ ಭೂಮಿಯು ಫಲವೂ ಅವನ ಕೈ ಪ್ರಯಾಸವೂ ಅವನ ದನ, ಕುರಿ, ಪಶುಗಳೂ ಆಶೀರ್ವದಿಸಲ್ಪಡುವವು. ಅವನ ಪುಟ್ಟಿಗಳಿಗೂ, ಕೊಣವಿಗಳಿಗೂ ಶುಭವುಂಟಾಗುವದು. ಅವನು ಬರುವಾಗಲೂ ಹೋಗುವಾಗಲೂ ಆಶೀರ್ವದಿಸಲ್ಪಡುವನು. ಶತ್ರುಗಳು ಅವನ ಮುಂದೆ ಸೋತುಹೋಗುವರು. ಒಂದು ದಾರಿಯಿಂದ ಬರುವವರು. ಏಳು ದಾರಿಗಳಲ್ಲಿ ಅವನ ಮುಂದೆಯೇ ಓಡಿಹೋಗುವರು. ಯಾವ ಯಾವ ದೇಶಗಳು ಸತ್ಯವೇದಕ್ಕೆ ಪ್ರಾಧಾನ್ಯತೆ ಕೊಟ್ಟು ಸತ್ಯವೇದದ ಮಾರ್ಗದಲ್ಲಿ ನಡೆಯಲು ತೀರ್ಮಾನಿಸಿದವೋ, ಆ ದೇಶಗಳೆಲ್ಲಾ ಕರ್ತನಿಂದ ಆಶೀರ್ವದಿಸಲ್ಪಟ್ಟವು. ವಿಕ್ಟೋರಿಯಾ ಮಹಾರಾಣಿ ಕಾಲದಲ್ಲಿ ಇಂಗ್ಲೆಂಡ್ ದೇಶವು ಸತ್ಯವೇದಕ್ಕೆ ಬಹಳವಾದ ಪ್ರಾಮುಖ್ಯತೆಯನ್ನು ಕೊಟ್ಟಿತು. ಆದ್ದರಿಂದ ಸತ್ಯವೇದವನ್ನು ಓದಿ ಅದನ್ನು ಗೌರವಿಸಿದ ಈ ಮಹಾರಾಣಿ ಆಕೆ ನಡೆಸುವಾಗ ಬ್ರಿಟಿಷ್ ಸಾಮ್ರಾಜ್ಯವು ಪ್ರಪಂಚದ ಅನೇಕ ಕಡೆಗಳಲ್ಲಿ ವಿಸ್ತಾರಗೊಂಡಿತು. ದೇವರ ಕಟ್ಟಳೆಗಳನ್ನು ಕೈಗೊಳ್ಳುವಾಗ, ಕರ್ತನು ನಮ್ಮೊಂದಿಗೂ ನಮ್ಮ ಕುಟುಂಬದೊಂದಿಗೂ ಒಡಂಬಡಿಕೆ ಮಾಡುವನು. ಅದರಿಂದ ನಮಗೆ ಯಾವ ಯಾವ ಆಶೀರ್ವಾದ ಬರುವದು? 1. ಯೆಹೋವನು ನಿಮಗೆ ಕೊಡುವ ದೇಶದಲ್ಲಿ ಸದಾಕಾಲ ಬಾಳುವಿರಿ (ಧರ್ಮೋ.4:40). 2. ಸಾವಿರ ತಲೆಗಳವರೆಗೆ ದಯೆತೋರಿಸುವನು (ವಿಮೋ. 20:6), 3.ನೀವು ಕರ್ತನಿಗೆ ಸ್ವಕೀಯ ಪ್ರಜೆಗಳಾಗಿರುವಿರಿ (ಧರ್ಮೋ. 26:18). 4. ನಾನು ನಿನ್ನೊಂದಿಗೆ ಇದ್ದು ನಿನ್ನ ಸಂತಾನವನ್ನು ಸ್ಥಿರಪಡಿಸುವೆನು (1 ಅರಸು. 11:38). 5. ನೀನು ನಿತ್ಯಜೀವದಲ್ಲಿ ಸೇರುವಿ (ಮತ್ತಾ. 19:17).

ದೇವಜನರೇ, ಸತ್ಯವೇದದಲ್ಲಿ ಇನ್ನೂ ಅನೇಕ ಆಶೀರ್ವಾದಗಳಿರುವವು. ಆ ಎಲ್ಲಾ ಆಶೀರ್ವಾದಗಳಿಗೆ ಬಾಧ್ಯಸ್ಥರಾಗಬೇಕಾದರೆ, ದೇವರ ಆಜ್ಞೆಗಳನ್ನು ಕೈಕೊಂಡು ನಡೆಯಿರಿ.

*ನೆನಪಿಗೆ : "ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ ಆತನ ಆಜ್ಞೆಗಳು ಭಾರವಾದವುಗಳಲ್ಲ" (1 ಯೋಹಾನ 5:3).*



ಏಪ್ರಿಲ್ 29

## ದೇವರ ವಾಕ್ಯಗಳಿಂದ ಆಶೀರ್ವಾದ!

ಬೆಳಿಗ್ಗೆ : 1 ಅರಸು 6,7
ಸಂಜೆ : ಲೂಕ. 20:20–47

"ನನ್ನನ್ನು ಪ್ರೀತಿಸಿ ನನ್ನ ಆಜ್ಞೆಗಳನ್ನು ಕೈಕೊಳ್ಳುವವರಿಗೋ ಸಾವಿರ ತಲೆಗಳವರೆಗೆ ದಯೆ ತೋರಿಸುವವನಾಗಿಯೂ ಇದ್ದೇನೆ" (ವಿಮೋ. 20:6).

ಸತ್ಯವೇದ ವಾಕ್ಯಗಳನ್ನು ಓದುವದು ಭಾಗ್ಯಕರವಾದದ್ದು, ಕೇಳುವದು ಭಾಗ್ಯಕರವಾದದ್ದು; ಬರೆದಿರುವದನ್ನು ಕೈಕೊಳ್ಳುವದು ಭಾಗ್ಯಕರವಾದದ್ದು (ಪ್ರಕ. 1:3). ಸತ್ಯವೇದವು ನಮಗೆ ಭಾಗ್ಯಕರವಾದ ಜೀವಿತವನ್ನು ವಾಗ್ದಾನಿಸಿರುವದು. ಯೆಹೋಶುವನಿಗೆ ದೇವರು ಹೀಗೆ ಹೇಳುತ್ತಾನೆ– "ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ" ಎಂದು (ಯೆಹೊಶುವ 1:8).

ಭಕ್ತರಾದ ಡಿ.ಎಲ್. ಮೂಡಿ ಹೇಳುತ್ತಾರೆ– "ನೀವು ಯೌವನ ಪ್ರಾಯದಲ್ಲಿ ಸತ್ಯವೇದವನ್ನು ಹೊತ್ತರೆ, ವೃದ್ಧಾಪ್ಯದಲ್ಲಿ ಸತ್ಯವೇದವು ನಿಮ್ಮನ್ನು ಹೊರುವದು" ಸತ್ಯವೇದವು ನಿಮ್ಮನ್ನು ಪಾಪಕ್ಕೆ ದೂರ ಮಾಡುತ್ತದೆ. ನೀವು ಸತ್ಯವೇದದ ಪ್ರಕಾರ ನಡೆಯದೇ ಹೋದರೆ, ಪಾಪವು ನಿಮ್ಮನ್ನು ಸತ್ಯವೇದದಿಂದ ದೂರಮಾಡುವದು ಎಂದು. ದೇವಮನುಷ್ಯರಾದ ಬಿಲಿಗ್ರಹಾಂ ಹೇಳುತ್ತಾರೆ– "ಈ ಪ್ರಪಂಚದಲ್ಲಿ ಒಂದು ಭಾಗ್ಯಕರವಾದ ಜೀವಿತ ಜೀವಿಸುವಂತೆ, ಕರ್ತನು ನನಗೆ ಸಹಾಯ ಮಾಡಿದನು. ಅದಕ್ಕೆ ಕಾರಣ ಈ ಸತ್ಯವೇದ ಪುಸ್ತಕವೇ" ಎಂದು. ಅವರು ಸತ್ಯವೇದವನ್ನು ಪುನಃ ಪುನಃ ಓದಿ ಪರೀಕ್ಷಿಸಿದವರು. ನಾಲ್ಕು ಸಾವಿರಕ್ಕೂ ಅಧಿಕವಾದ ಪ್ರಸಂಗಗಳನ್ನು ಸತ್ಯವೇದದಿಂದ ಸಿದ್ಧಪಡಿಸಿದವರು. ಇಂದು ತಮ್ಮ ಇಳಿವಯಸ್ಸಿನಲ್ಲಿ ಯೌವನಸ್ಥರಿಗೆ ತಮ್ಮ ಭಾಗ್ಯಕರವಾದ ಜೀವಿತದ ರಹಸ್ಯವನ್ನು ತಿಳಿಸುತ್ತಿರುವರು. ಸತ್ಯವೇದವನ್ನು ಓದುವದರಿಂದ ನಮಗೆ ಸಿಗುವ ಇನ್ನೊಂದು ಬಹು ದೊಡ್ಡ ಆಶೀರ್ವಾದ ಫಲಕೊಡುವ ಜೀವಿತ. (ಕೀರ್ತ.1:2,3). ಮೂರನೆಯ ಭಾಗ್ಯ, ಅಜ್ಞಾನಿಗಳನ್ನು ಜ್ಞಾನಿಗಳನ್ನಾಗಿ ಮಾರ್ಪಡಿಸುವದು. "ನಿನ್ನ ವಾಕ್ಯ ವಿವರಣೆಯಿಂದ ಯುಕ್ತಿಹೀನರಿಗೆ ಜ್ಞಾನೋದಯವಾಗುವದು" (ಕೀರ್ತ. 119:130).

ದೇವಜನರೇ, ಯೆಹೋವನ ಧರ್ಮಶಾಸ್ತ್ರವು ದೋಷವಿಲ್ಲದ್ದು, ಅದು ಪ್ರಾಣವನ್ನು ಉಜ್ಜೀವನ ಮಾಡುವಂಥದ್ದು. ಆತನ ಕಟ್ಟಳೆಗಳು ನಂಬಿಕೆಗೆ ಯೋಗ್ಯವಾದದ್ದು; ಬುದ್ಧಿಹೀನರಿಗೆ ವಿವೇಕಪ್ರದವಾದದ್ದು (ಕೀರ್ತ. 19:7). ಪ್ರಿಯರೇ, ಸತ್ಯವೇದವನ್ನು ಪ್ರೀತಿಸಿರಿ. ಅನುದಿನವೂ ಓದಿರಿ. ದೇವರ ವಾಕ್ಯದಂತೆ ನಡೆಯಿರಿ. ಆಗ ನಿಮ್ಮ ಮಾರ್ಗಗಳಲ್ಲೆಲ್ಲಾ ಸಫಲಗೊಳ್ಳುವಿರಿ.

*ನೆನಪಿಗೆ : "ನನ್ನ ವಾಕ್ಯಗಳನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವದಿಲ್ಲ. ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ (ಯೋಹಾ. 5:24).*